# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ : 24-03-2021

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451
ಶಿವಮೊಗ್ಗ ಜಿಲ್ಲೆ.

J:VISHWA:UAT-1:BORDER

Scanned with CamScanner

ಫ್ಯಾಕ್ಸ್: 08282-256262
ಇ-ಮೇಲ್ :drsyndicateku@gmail.com

☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್ :www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಏಟಿ-1:ಸಿಂ.2-21: 41 :2021-22 ದಿನಾಂಕ:10-05-2021

ಮಾನ್ಯರೆ,

ವಿಷಯ: ದಿನಾಂಕ:24-03-2021ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ, ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು, ಅಧ್ಯಾಯ-III ರ ಪ್ರಕರಣ- 16 ರನ್ವಯ ***ದಿನಾಂಕ:24-03-2021 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ*** ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು, ಅಧ್ಯಾಯ-IIIರ ಪ್ರಕರಣ- 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ 07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ **ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

***ವಿ.ಸೂ: ಸದರಿ ನಡಾವಳಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥವತ್ತಾಗಿ ಪ್ರಕಟಿಸಲಾಗಿದೆ.***

ತಮ್ಮ ವಿಶ್ವಾಸಿ,

(ಪ್ರೊ. ಎಸ್.ಎಸ್. ಪಾಟೀಲ್)
ಕುಲಸಚಿವರು.

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.** 10/5

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
9) ***ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.***
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
16) ಕಾರ್ಯಪಾಲಕ ಅಭಿಯಂತರರು, ಇಂಜನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
19) ಕಛೇರಿ ಪ್ರತಿ / ರಕ್ಷಣಾ ಕಡತ.

J:VISHWA-UAT-1:SYD-PRO-COV-LTR

Scanned with CamScanner

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:24-03-2021 ರಂದು ಬುಧವಾರ ಪೂರ್ವಾಹ್ನ: 11.00 ಗಂಟೆಗೆ ವಿಶ್ವವಿದ್ಯಾಲಯದ ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಭವನದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | |
|---|---|
| 1. ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. ಪ್ರೊ. ಎಸ್.ಎಸ್. ಪಾಟೀಲ್, ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. ಪ್ರೊ. ಪಿ. ಕಣ್ಣನ್, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 5. ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 7. ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 8. ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 9. ಶ್ರೀ ಧರ್ಮ ಪ್ರಸಾದ್ ಜಿ. | ಸದಸ್ಯರು |
| 10. ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 11. ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 12. ಡಾ. ಯುವರಾಜ ಬಿ. ಹೆಚ್. ಪ್ರಾಂಶುಪಾಲರು | ಸದಸ್ಯರು |
| 13. ಶ್ರೀ ಕರುಣಾಕರ ಬಿ., ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

1) ಶ್ರೀ ಕೆ.ಸಿ. ವೀರಭದ್ರಯ್ಯ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ
2) ಡಾ. ಹೆಚ್. ರಾಜೇಶ್ವರಿ, ಪ್ರಾಂಶುಪಾಲರು
3) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.
5) ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
6) ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು**

1. ಪ್ರೊ. ಕೃಷ್ಣ ವಿ., ಪ್ರಾಧ್ಯಾಪಕರು

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಪತಿಯವರು ಆತ್ಮೀಯವಾಗಿ ಸ್ವಾಗತ ಕೋರಿದರು. ಮುಂದುವರೆದು ಪ್ರಾಸ್ತಾವಿಕವಾಗಿ ಮಾತನಾಡಿದ ಕುಲಪತಿಗಳು ಪ್ರಾಧ್ಯಾಪಕರ ಜ್ಯೇಷ್ಠತೆಯಲ್ಲಿ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿ ಫೆಬ್ರವರಿ-2021 ರಂದು ವಯೋನಿವೃತ್ತಿ ಹೊಂದಿದ ನಿಕಟಪೂರ್ವ ಸಿಂಡಿಕೇಟ್ ಸದಸ್ಯರಾದ ಪ್ರೊ. ಎಸ್.ಎ. ಜಾವೀದ್ ಇವರು ಇದುವರೆಗಿನ ಸಭೆಯಲ್ಲಿ ಸೂಕ್ತ ಸಲಹೆ ಮತ್ತು ಸಹಕಾರ ನೀಡಿರುವುದನ್ನು ಸ್ಮರಿಸುತ್ತಾ, ಸದರಿಯವರು ಸಿಂಡಿಕೇಟ್ ಸದಸ್ಯರಾಗಿ ನೀಡಿದ ಕೊಡುಗೆಯನ್ನು ಸಹ ಸ್ಮರಿಸಿ ಅವರನ್ನು ಸಿಂಡಿಕೇಟ್‌ನ ಎಲ್ಲಾ ಸದಸ್ಯರ ಪರವಾಗಿ ಸನ್ಮಾನಿಸಲಾಯಿತು.



Scanned with CamScanner

ಮುಂದುವರೆದು ಮಾತನಾಡಿದ ಕುಲಪತಿಗಳು ಪ್ರಾಧ್ಯಾಪಕರ ಜ್ಯೇಷ್ಠತೆಯಲ್ಲಿ ಹಿರಿಯರಾಗಿ ಸರ್ಕಾರದಿಂದ ನೂತನವಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ನೂತನ ಸದಸ್ಯರಾದ ಪ್ರೊ ವಿ.ಕೃಷ್ಣ ಇವರಿಗೆ ಅವರ ಅನುಪಸ್ಥಿತಿಯಲ್ಲಿ ಸ್ವಾಗತ ಕೋರಿದರು. ನಂತರ ನಿರ್ಗಮಿತ ಸದಸ್ಯರಾದ ಪ್ರೊ. ಎಸ್.ಎ. ಜಾವೀದ್ ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿನ ತಮ್ಮ 32 ವರ್ಷಗಳ ಸುದೀರ್ಘ ಸೇವೆಯಲ್ಲಿ ವಿಶ್ವವಿದ್ಯಾಲಯವು ತಮಗೆ ಎಲ್ಲಾ ಸ್ಥಾನಮಾನವನ್ನು ನೀಡಿರುವುದಲ್ಲದೇ ಅತ್ಯುನ್ನತ ಪ್ರಾಧಿಕಾರವಾದ ಸಿಂಡಿಕೇಟ್ ಸದಸ್ಯತ್ವವನ್ನೂ ನೀಡಿ ತಮಗೆ ಮಾನ್ಯತೆ ನೀಡಿರುವುದನ್ನು ಸ್ಮರಿಸಿ ಇದಕ್ಕೆ ತಾವು ಅಬಾರಿಯಾಗಿರುವುದಾಗಿ ತಿಳಿಸಿದರು. ಹಾಗೂ ತಮ್ಮನ್ನು ವಿಶ್ವವಿದ್ಯಾಲಯದ ವಿವಿಧ ಸಮಿತಿಗಳಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡಿರುವುದನ್ನು ಸ್ಮರಿಸಿ ಮೊದಲು ವಿಶ್ವವಿದ್ಯಾಲಯಕ್ಕೆ ನಂತರ ಸಿಂಡಿಕೇಟ್ ಅಧ್ಯಕ್ಷರಾದ ಕುಲಪತಿಗಳು ಹಾಗೂ ಎಲ್ಲಾ ಸದಸ್ಯರುಗಳಿಗೆ ಧನ್ಯವಾದವನ್ನು ಅರ್ಪಿಸುವುದಾಗಿ ತಿಳಿಸಿದರು. ಸಿಂಡಿಕೇಟ್ ಸದಸ್ಯರೆಲ್ಲರೂ ಪ್ರೊ. ಎಸ್.ಎ. ಜಾವೀದ್ ಇವರ ಸೇವೆಯನ್ನು ಸ್ಮರಿಸಿ ಬೀಳ್ಕೊಟ್ಟರು.

ನಂತರ ಕುಲಪತಿಗಳು ತಮ್ಮ ಪ್ರಾಸ್ತಾವಿಕ ನುಡಿಯನ್ನು ಮುಂದುವರೆಸುತ್ತಾ, ದಿನಾಂಕ:23-03-2021 ರಂದು ತಾವು ಮಾಧ್ಯಮದವರನ್ನು ಆಹ್ವಾನಿಸಿ ಪತ್ರಿಕಾ ಗೋಷ್ಠಿಯನ್ನು ಏರ್ಪಡಿಸಿ ಇತ್ತೀಚೆಗೆ ವಿಶ್ವವಿದ್ಯಾಲಯದ ಕೆಲವು ಅಧಿಕಾರಿಗಳು ಮತ್ತು ಅಧ್ಯಾಪಕರುಗಳ ವಿರುದ್ದ ಜೈ ಭೀಮ್ ಕನ್ನಡ ಜಾಗೃತಿ ವೇದಿಕೆ ಮತ್ತು ಎಸ್.ಸಿ.ಎಸ್.ಟಿ. ಅಸಂಘಟಿತ ಕಾರ್ಮಿಕರ ಅಭಿವೃದ್ಧಿ ಸಂಘ(ರಿ) ಎಂಬ ಸಂಘಟನೆಯೊಂದು ಮಾಡಿರುವ ಆರೋಪಗಳ ಕುರಿತು ಸಂಘಟನೆಯ ದೂರಿನಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ ಹಾಗೂ ಆರೋಪಗಳು ನಿರಾಧಾರವಾಗಿರುವುದಾಗಿ ಸ್ಪಷ್ಟೀಕರಣವನ್ನು ನೀಡಲಾಗಿದೆ ಎಂದು ಸಭೆಗೆ ವಿವರಿಸಿದರು, ರಾಜ್ಯದ ಇತರೆ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷಾ ವಿಭಾಗದ ಸುಧಾರಣೆಗೆ ಕೈಗೊಂಡಿರುವ ಕ್ರಮದಂತೆಯೇ ಕುವೆಂಪು ವಿಶ್ವವಿದ್ಯಾಲಯವೂ ಸಹ ಪರೀಕ್ಷಾ ಕ್ರಮಗಳ ಸುಧಾರಣೆಗೆ ಒತ್ತು ನೀಡಿ ಹಲವು ಕ್ರಮಗಳನ್ನು ಕೈಗೊಂಡಿರುವುದನ್ನು ಸಭೆಯ ಗಮನಕ್ಕೆ ತಂದರು. ಈ ಎಲ್ಲಾ ಕಾರಣಗಳಿಂದ ವಿಶ್ವವಿದ್ಯಾಲಯವು ಈ ಮಟ್ಟದ ಪ್ರಗತಿ ಮತ್ತು **ನ್ಯಾಕ್‌ನಲ್ಲಿ 'ಎ' ಶ್ರೇಣಿ** ಹಾಗೂ **ಎನ್.ಐ.ಆರ್.ಎಫ್ ನಲ್ಲಿ 73ನೇ ಸ್ಥಾನ** ಪಡೆಯಲು ಸಾಧ್ಯವಾಯಿತು ಎಂದರು. ಈಗಿರುವ ಸ್ಥಾನವನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯುವ ಜವಾಬ್ದಾರಿ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು, ಕುಲಸಚಿವರು(ಪರೀಕ್ಷಾಂಗ) ಇವರುಗಳ ಜೊತೆಯಲ್ಲಿ ಎಲ್ಲಾ ಪ್ರಾಧಿಕಾರಗಳ ಸದಸ್ಯರುಗಳ ಸಹಕಾರ ಅತ್ಯಗತ್ಯವೆಂದರು.

ಮುಂದುವರೆದು ಮಾತನಾಡಿದ ಕುಲಪತಿಗಳು, ವಿಶ್ವವಿದ್ಯಾಲಯದ ಅಧ್ಯಾಪಕರುಗಳು / ಅಧಿಕಾರಿಗಳ ವಿರುದ್ದ ಜೈ ಭೀಮ್ ಕನ್ನಡ ಜಾಗೃತಿ ವೇದಿಕೆ ಮತ್ತು ಎಸ್.ಸಿ.ಎಸ್.ಟಿ. ಅಸಂಘಟಿತ ಕಾರ್ಮಿಕರ ಅಭಿವೃದ್ಧಿ ಸಂಘ(ರಿ) ಎಂಬ ಸಂಘಟನೆಯು ಮಾಡಿರುವ ಆರೋಪಗಳಿಂದ ವಿಶ್ವವಿದ್ಯಾಲಯದ ಘನತೆ ಮತ್ತು ಗೌರವಕ್ಕೆ ಚ್ಯುತಿಯುಂಟಾಗಿರುವುದರಿಂದ ಸದರಿ ಸಂಘಟನೆಯ ವಿರುದ್ದ ವಿಶ್ವವಿದ್ಯಾಲಯದ ವತಿಯಿಂದ ಮಾನನಷ್ಟ ಮೊಕದ್ದಮೆ ಹೂಡಲು ನಿರ್ಧರಿಸಿರುವುದಾಗಿ ಸಭೆಯ ಗಮನಕ್ಕೆ ತಂದರು. ಈ ವಿಷಯವನ್ನು ಪರಿಹರಿಸಲು ಹಾಗೂ ಅವರ ವಿರುದ್ಧ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಕೋವಿಡ್-19 ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡುತ್ತಿಲ್ಲವಾದ್ದರಿಂದ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಅಭಿವೃದ್ಧಿಗೆ ಹಿನ್ನೆಡೆಯಾಗುತ್ತಿರುವುದನ್ನು ಸಭೆಗೆ ವಿವರಿಸಿದರು. ದೂರಶಿಕ್ಷಣದಲ್ಲಿ ಆನ್-ಲೈನ್ ಕೋರ್ಸ್‌ನ್ನು ಪ್ರಾರಂಭಿಸಲು ಈಗಾಗಲೇ ಪೂರ್ವಭಾವಿ ಕ್ರಮಗಳನ್ನು ಕೈಗೊಂಡಿರುವುದನ್ನು ಸಭೆಗೆ ವಿವರಿಸಿದರು.

ವಿಶ್ವವಿದ್ಯಾಲಯದಲ್ಲಿ ಅನೇಕ ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿಗಳು ವಯೋನಿವೃತ್ತಿ ಹೊಂದಿದ್ದು, ಪಾಠ ಪ್ರವಚನಗಳಿಗೆ ಬೋಧಕರ ಕೊರತೆಯುಂಟಾಗಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಕ್ಕೆ



Scanned with CamScanner

ಅಗತ್ಯವಾಗಿರುವ ಬೇಕಾಗಿರುವ ಬೋಧಕ-ಬೋಧಕೇತರ ಹುದ್ದೆಗಳ ಭರ್ತಿಗಾಗಿ ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯು ಅನುಮೋದನೆಯಾಗಿ ಬಂದಲ್ಲಿ ಹೆಚ್ಚು ಅನುಕೂಲವಾಗುವುದು ಎಂದರು. ವಿಶ್ವವಿದ್ಯಾಲಯದ ಸರ್ವತೋಮುಖ ಅಭಿವೃದ್ದಿಗೆ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಸೂಕ್ತ ಸಲಹೆ ಹಾಗೂ ವಿಶ್ವವಿದ್ಯಾಲಯವು ಉನ್ನತ ಸ್ಥಾನಕ್ಕೇರಲು ಸಹಕಾರವನ್ನು ಕೋರುವುದಾಗಿ ತಿಳಿಸಿದರು. ಇದಕ್ಕೆ ಎಲ್ಲಾ ಸದಸ್ಯರುಗಳು ಸಮ್ಮತಿ ಸೂಚಿಸಿದರು.

ನಂತರದಲ್ಲಿ, ಸಭೆಯ ಕಾರ್ಯಸೂಚಿಯನ್ವಯ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

**ದಿನಾಂಕ:21-01-2021 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದೂಡಿದ ವಿಷಯ**

**ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ**

**2021-ಸಿಂ-1.40(ಎ):** ಕುವೆಂಪು ವಿಶ್ವವಿದ್ಯಾಲಯದ ಹಂಗಾಮಿ ನೌಕರರ ಸಕ್ರಮಾತಿಯನ್ನು ರದ್ದುಗೊಳಿಸಿ ಹೊರಡಿಸಿರುವ ಸರ್ಕಾರಿ ಆದೇಶಗಳನ್ನು ಹಿಂಪಡೆಯುವ ಬಗ್ಗೆ.

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು, ಸದರಿ ವಿಷಯವು ಬಹಳ ವರ್ಷಗಳಿಂದಲೂ ಸರ್ಕಾರದಿಂದ ಆಕ್ಷೇಪವಾಗುತ್ತಾ ಬಂದಿದ್ದು, ಈ ಹಿಂದೆಯೂ ಸಿಂಡಿಕೇಟ್ ಸಭೆಯಲ್ಲಿಯೂ ಸಹ ಪ್ರಸ್ತಾಪವಾಗಿದ್ದು ಸಭೆಯು ವಿಶ್ವವಿದ್ಯಾಲಯದ ಕ್ರಮವನ್ನು ಸಮರ್ಥಿಸಿಕೊಂಡು ಸರ್ಕಾರಕ್ಕೆ ಪತ್ರ ಬರೆದಿರುವುದನ್ನು ಸಭೆಯ ಗಮನಕ್ಕೆ ತಂದರು. ಮುಂದುವರೆದು ಮಾತನಾಡಿದ ಕುಲಸಚಿವರು ಸರ್ಕಾರಕ್ಕೆ ಮತ್ತೊಮ್ಮೆ ವಿವರಗಳೊಂದಿಗೆ ಪತ್ರ ಬರೆಯುವುದು ಅಥವಾ ಸರ್ಕಾರದ ಪತ್ರದಂತೆ ಸಂಬಂಧಪಟ್ಟ ಸಿಬ್ಬಂದಿಗಳಿಗೆ ನೋಟೀಸ್ ನೀಡುವುದು ಇವೆರಡರಲ್ಲಿ ಯಾವುದಾದರೂ ಒಂದು ಕ್ರಮಕೈಗೊಳ್ಳುವುದೊಂದೇ ದಾರಿ ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಮಂಜೂರಾದ ಹುದ್ದೆಗೆದುರಾಗಿ ಖಾಯಂಗೊಳಿಸಿರುವುದರಿಂದ, ಸದರಿ ನೌಕರರುಗಳಿಗೆ ಅನುಭವ ಇರುವುದರಿಂದ ಇವೆಲ್ಲಕ್ಕಿಂತ ಹೆಚ್ಚಾಗಿ ಸರ್ವೋಚ್ಚ ನ್ಯಾಯಾಲಯದ ಉಮಾದೇವಿ ಪ್ರಕರಣವು ಇವರುಗಳಿಗೆ ಪೂರಕವಾಗಿರುವುದರಿಂದ ಇವೆಲ್ಲವನ್ನೂ ಮತ್ತೊಮ್ಮೆ ಉಲ್ಲೇಖಿಸಿ ಸರ್ಕಾರಕ್ಕೆ ಪತ್ರ ಬರೆಯುವುದು ಸೂಕ್ತವೆಂದು ಅಭಿಪ್ರಾಯವನ್ನು ನೀಡಿದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪ ಇವರು ಮಾತನಾಡುತ್ತಾ, ಸರ್ಕಾರವು ಕೋರಿದ ಮಾಹಿತಿಯೊಂದಿಗೆ ಮತ್ತೊಮ್ಮೆ ಪತ್ರ ಬರೆಯುವುದು ಸೂಕ್ತವೆಂದರು.

ಚರ್ಚೆಯ ಮಧ್ಯೆ ಮಾತನಾಡಿದ ಮಾನ್ಯ ಕುಲಪತಿಗಳು ಸರ್ವೋಚ್ಚ ನ್ಯಾಯಾಲಯದ ಉಮಾದೇವಿ ಪ್ರಕರಣದಲ್ಲಿ ತೀರ್ಪಿನ ಹಿಂದಿನ ಪ್ರಕರಣಗಳನ್ನು ಪುನರ್ ಪರಿಶೀಲನೆಗೆ ಅವಕಾಶವಿರುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿರುವುದರಿಂದ ಇದು ಈ ಸಿಬ್ಬಂದಿಗಳಿಗೆ ಕಾನೂನಾತ್ಮಕವಾಗಿ ರಕ್ಷಣೆ ಇದೆ ಎಂದರು.

ಸದಸ್ಯರಾದ ಶ್ರೀ ಬಿ. ಕರುಣಾಕರ ಇವರು ಮಾತನಾಡುತ್ತಾ, ಯಾವುದೇ ಸಿಬ್ಬಂದಿಗಳನ್ನು ಸೇವೆಯಲ್ಲಿ ಸಕ್ರಮ ಮಾಡಬೇಕಾದಲ್ಲಿ ಅದಕ್ಕೆ ವಿಶೇಷ ನಿಯಮಾವಳಿಯನ್ನು ರೂಪಿಸಿ ಅದನ್ನು ಕುಲಾಧಿಪತಿಗಳ ಅನುಮೋದನೆ ಪಡೆದು ಅದರಂತೆ ಕ್ರಮ ಕೈಗೊಳ್ಳಬೇಕಾಗಿತ್ತು. ಆದರೆ ಇಲ್ಲಿ ಖಾಯಂಗೊಳಿಸಿರುವ ವಿಧಾನದಲ್ಲಿ ತಪ್ಪಾಗಿದ್ದು ವಿಶ್ವವಿದ್ಯಾಲಯದದಿಂದ ಕಳುಹಿಸಲಾದ ನಿಯಮಾವಳಿಯು ಅನುಮೋದನೆಯಾಗಿರುವುದಿಲ್ಲವೆಂದರು. ಆದುದರಿಂದ ಸಿಂಡಿಕೇಟ್ ಸದಸ್ಯರ ನಿಯೋಗವು ಸರ್ಕಾರದ ಸಂಬಂಧಪಟ್ಟವರೊಂದಿಗೆ ನ್ಯಾಯಾಲಯದ ತೀರ್ಪು, ಸರ್ಕಾರದ ಆದೇಶ ಇತ್ಯಾದಿಗಳನ್ನು ವಿವರಿಸಿ ಇತ್ಯರ್ಥಪಡಿಸಿಕೊಳ್ಳುವುದು ಸೂಕ್ತವೆಂದು ಅಭಿಪ್ರಾಯವನ್ನು ನೀಡಿದರು.



Scanned with CamScanner

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಸರ್ಕಾರದ ಪತ್ರಕ್ಕೆ ವಿಶ್ವವಿದ್ಯಾಲಯವು ಮಂಜೂರಾದ ಹುದ್ದೆಗೆದುರಾಗಿ ಪರಿಗಣಿಸಿರುವುದನ್ನು ಎಲ್ಲಾ ಸಿಬ್ಬಂದಿಗಳೂ ಸಾಕಷ್ಟು ಅನುಭವ ಮತ್ತು ಆಯಾಯ ಹುದ್ದೆಗೆ ಅರ್ಹರಾಗಿರುವುದನ್ನು ಹಾಗೂ ಭಾರತದ ಸರ್ವೋಚ್ಚ ನ್ಯಾಯಾಲಯದ ಉಮಾದೇವಿ ಪ್ರಕರಣದಲ್ಲಿ ನೀಡಿರುವ ತೀರ್ಪು, ಅದಕ್ಕೆ ಸರ್ಕಾರವು ಹೊರಡಿಸಿರುವ ಸುತ್ತೋಲೆ ಇವುಗಳೆಲ್ಲವನ್ನೂ ಉಲ್ಲೇಖಿಸಿ ಸರ್ಕಾರಕ್ಕೆ ಮತ್ತೊಮ್ಮೆ ಸವಿವರವಾದ ಪತ್ರವನ್ನು ಬರೆದು ಇಲ್ಲಿಗೆ ಈ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಕೋರಲು ನಿರ್ಣಯಿಸಲಾಯಿತು.

**ದಿನಾಂಕ:24-03-2021 ರ ಸಿಂಡಿಕೇಟ್ ಸಾಮಾನ್ಯ ಸಭೆಯ ವಿಷಯಗಳು:**

**ಪ್ರಾಧಿಕಾರಗಳ ವಿಭಾಗ**

**2021-ಸಿಂ-2.01:** ದಿನಾಂಕ:21-01-2021 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ.

**ಚರ್ಚೆ:** ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪ ಇವರು ಮಾತನಾಡುತ್ತಾ, ನಡಾವಳಿಯ ಪುಟ ಸಂಖ್ಯೆ 16 ರಲ್ಲಿ ಪರಿನಿಯಮಗಳ ಅನುಮೋದನೆಯ ನಿರ್ಣಯದಲ್ಲಿ ತಾವು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ ಪ್ರಕರಣ 41(2) ರ ಪ್ರಕಾರ ಮೊದಲು ಪರಿನಿಯಮವು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದನೆಯಾಗಿ ನಂತರ ಸಿಂಡಿಕೇಟ್ ಸಭೆಗೆ ಮಂಡಿಸುವುದು ಸೂಕ್ತವೆಂದು ನೀಡಿದ ಅಭಿಪ್ರಾಯವನ್ನು ದಾಖಲಿಸಿರುವುದಿಲ್ಲವಾದ್ದರಿಂದ ಅದನ್ನು ಸೇರ್ಪಡೆಗೊಳಿಸುವಂತೆ ಕೋರಿದರು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:21-01-2021ರ ಸಿಂಡಿಕೇಟ್ ಸಭೆಯ ನಡಾವಳಿಯಲ್ಲಿನ ಪರಿನಿಯಮಗಳ ಅನುಮೋದನೆಯ ನಿರ್ಣಯದಲ್ಲಿ ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪ ಇವರು ನೀಡಿದ ಅಭಿಪ್ರಾಯವನ್ನು ಸೇರ್ಪಡೆಗೊಳಿಸಿ ಉಳಿದಂತೆ ನಡಾವಳಿಯನ್ನು ಧೃಢೀಕರಿಸಲಾಯಿತು.

**2021-ಸಿಂ-2.02:**ದಿನಾಂಕ:21-01-2021 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ನಿರ್ಣಯಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ನಿರ್ಣಯ:** ದಿನಾಂಕ:21-01-2021 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ನಿರ್ಣಯಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಅಂಗೀಕರಿಸಿ ನಿರ್ಣಯಿಸಲಾಯಿತು.

**2021-ಸಿಂ-2.03:** ಕುವೆಂಪು ವಿಶ್ವವಿದ್ಯಾಲಯದ ಲೋಗೋ(ಲಾಂಛನ)ದಲ್ಲಿ "ಕುವೆಂಪು" ರವರ ಭಾವಚಿತ್ರವನ್ನು ಅಳವಡಿಸುವ ಬಗ್ಗೆ.

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು, ಸಾರ್ವಜನಿಕರಾದ ಶ್ರೀ ಆರ್. ರಾಮಮೂರ್ತಿ, ರಾಮಕೃಷ್ಣ ಬಡಾವಣೆ, ಬೆಂಗಳೂರು – ಇವರು ಕುವೆಂಪು ವಿಶ್ವವಿದ್ಯಾಲಯದ ಲಾಂಛನ(ಲೋಗೋ)ದಲ್ಲಿ ಕುವೆಂಪುರವರ ಭಾವಚಿತ್ರವನ್ನು ಅಳವಡಿಸುವಂತೆ ಮಾನ್ಯ ಉಪಮುಖ್ಯಮಂತ್ರಿ, ಕರ್ನಾಟಕ ಸರ್ಕಾರ ಹಾಗೂ ಕುವೆಂಪು ವಿಶ್ವವಿದ್ಯಾಲಯಕ್ಕೆ ಮನವಿ ಸಲ್ಲಿಸಿದ್ದು, ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಉಪಮುಖ್ಯಮಂತ್ರಿಯವರು ನಿರ್ದೇಶನ ನೀಡಿರುತ್ತಾರೆ. ವಿಶ್ವವಿದ್ಯಾಲಯದ ಪ್ರತಿಯೊಂದು ಕಾರ್ಯಕ್ರಮವನ್ನು ಆಯೋಜಿಸುವಾಗ ಕುವೆಂಪು ಅವರ ಭಾವಚಿತ್ರವನ್ನು ಬಳಸಲಾಗುತ್ತಿದೆ ಎಂದರು.



Scanned with CamScanner

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ಇವರು ಮಾತನಾಡುತ್ತಾ, ಈ ಹಿಂದೆ ಮಾಡಿರುವ ಲಾಂಛನದಲ್ಲಿ ಕೆಲವು ಧ್ಯೇಯವು ಅಡಗಿದ್ದು ಅದನ್ನು ಬದಲಾವಣೆ ಮಾಡುವುದು ಸೂಕ್ತವಾಗಲಾರದು ಎಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿ ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯವು ಲಾಂಛನವನ್ನು ಕಳೆದ 32 ವರ್ಷಗಳಿಂದ ಉಪಯೋಗಿಸುತ್ತಿದ್ದು, ಈಗ ಅದರ ಬದಲಾವಣೆಯು ಸೂಕ್ತವಲ್ಲವೆಂದರು. ಇದಕ್ಕೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಈ ವಿಷಯದ ಕುರಿತು ಸಾಧಕ ಭಾದಕಗಳನ್ನು ಪರಿಶೀಲಿಸಿ ವರದಿಯನ್ನು ನೀಡಲು ಕೆಳಕಂಡ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು.

| | | |
|---|---|---|
| 1. | ಶ್ರೀ ಹೆಚ್.ಬಿ. ರಮೇಶ್‌ಬಾಬು, ಸಿಂಡಿಕೇಟ್ ಸದಸ್ಯರು | : ಅಧ್ಯಕ್ಷರು |
| 2. | ಪ್ರೊ. ಪಂಚಾಕ್ಷರಯ್ಯ ನಿವೃತ್ತ ಅಧ್ಯಾಪಕರು, ಶಿವಮೊಗ್ಗ | : ಸದಸ್ಯರು |
| 3. | ಕಲಾ ನಿಕಾಯದ ಡೀನರು | : ಸದಸ್ಯರು |
| 4. | ಪ್ರೊ. ಜಿ. ಪ್ರಶಾಂತ ನಾಯಕ್, ಪ್ರಾಧ್ಯಾಪಕರು, ಕನ್ನಡ ಭಾರತಿ | : ಸದಸ್ಯರು |
| 5. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ, ಸಿಂಡಿಕೇಟ್ ಸದಸ್ಯರು | : ಸದಸ್ಯರು |
| 6. | ಶ್ರೀ ಬಳ್ಳೇಕೆರೆ ಸಂತೋಷ್, ಸಿಂಡಿಕೇಟ್ ಸದಸ್ಯರು | : ಸದಸ್ಯರು |
| 7. | ಉಪಕುಲಸಚಿವರು, ಪ್ರಾಧಿಕಾರಗಳ ವಿಭಾಗ | : ಸಂಚಾಲಕರು |

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2021–ಸಿಂ–2.04:** ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಮೆ:ಕೆ.ಎಸ್.ಎಫ್–9, ಬೆಂಗಳೂರು, ಇವರಿಂದ ಪಡೆಯುತ್ತಿರುವ ಕುರಿತು.

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು, ಈ ಸಂಸ್ಥೆಯ ಕಾರ್ಯವೈಖರಿಯ ಕುರಿತು ಇದುವರೆಗೂ ಯಾವುದೇ ಲಿಖಿತ ದೂರುಗಳು ಬಂದಿಲ್ಲವಾದ್ದರಿಂದ ಸೇವೆಯನ್ನು ಮೊಟಕುಗೊಳಿಸಿದಲ್ಲಿ ಕಾನೂನಾತ್ಮಕ ಅಡೆತಡೆಗಳಾಗುವ ಸಾಧ್ಯತೆಯಿದೆ ಎಂದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್ ಇವರು ಮಾತನಾಡುತ್ತಾ, ಸದರಿ ಸಂಸ್ಥೆಯು ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ವೇತನ ಪಾವತಿಸದೇ ಇರುವುದನ್ನು ವಿವರಿಸಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ಇವರು ಮಾತನಾಡುತ್ತಾ, ಈ ಏಜೆನ್ಸಿಯವರು ಇದುವರೆಗೂ ಪಾವತಿಸಿರುವ ವೇತನ, ಹಾಜರಾತಿ, ಇ.ಎಸ್.ಐ. ಪಿ.ಎಫ್ ಪಾವತಿ ವಿವರ ಬ್ಯಾಂಕ್ ತ:ಖ್ತೆ ಇತ್ಯಾದಿಗಳನ್ನು ಪಡೆದು ಪರಿಶೀಲಿಸುವುದು ಸೂಕ್ತ ಹಾಗೂ ಒಡಂಬಡಿಕೆಯಲ್ಲಿ 3 ವರ್ಷ ಅಥವಾ ಮುಂದಿನ ಆದೇಶದವರೆಗೆ ಎಂದಿರುವುದರಿಂದ ಯಾವುದೇ ಕಾನೂನಾತ್ಮಕ ಸಮಸ್ಯೆಗಳು ಉದ್ಭವಿಸಲಾರದು ಎಂದು ಅಭಿಪ್ರಾಯವನ್ನು ನೀಡಿದರು. ಇದಕ್ಕೆ ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್. ರವರು ಧ್ವನಿಗೂಡಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಮೆ.ಕೆ.ಎಸ್.ಎಫ್–9 ಸಂಸ್ಥೆಯವರಿಗೆ ಈ ಲೋಪಗಳ ಕುರಿತು ಶೋಕಾಸ್ ನೋಟಿಸ್ ನೀಡಿ, ಈ ಬಗ್ಗೆ ಸದರಿ ಸಂಸ್ಥೆಯ ಸಮಜಾಯಿಷಿ ಉತ್ತರವನ್ನು ಪಡೆದು



Scanned with CamScanner

ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಿ ಪರಿಶೀಲಿಸಿದ ನಂತರ ರೀ-ಟೆಂಡರ್ ಬಗ್ಗೆ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

**2021-ಸಿಂ-2.05:** ಡಾ. ಎಸ್.ಎಂ. ಪ್ರಕಾಶ್, ನಿರ್ದೇಶಕರು, ದೈಹಿಕ ಶಿಕ್ಷಣ ಇವರು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವಾ ಅವಧಿಯ ಗಳಿಕೆ ರಜೆ ಮುಂದುವರೆಸುವ ಕುರಿತು.

**ನಿರ್ಣಯ:** ಡಾ. ಎಸ್.ಎಂ. ಪ್ರಕಾಶ್ ಇವರು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವಾವಧಿಯ ಗಳಿಕೆ ರಜೆಯನ್ನು ಮುಂದುವರೆಸಿ ನಿವೃತ್ತಿ ಸೌಲಭ್ಯಗಳಿಗೆ ಪರಿಗಣಿಸಲು ನಿರ್ಣಯಿಸಲಾಯಿತು.

**2021-ಸಿಂ-2.06:** ವೃತ್ತಿ ಪದೋನ್ನತಿ (C.A.S) ಸಂಬಂಧದ B.O.A ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

**ನಿರ್ಣಯ** :ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರುಗಳಿಗೆ ಎಜಿಪಿ ಹಾಗೂ ವೃತ್ತಿ ಪದೋನ್ನತಿಗೆ ಸಂಬಂಧಿಸಿದ ನೇಮಕಾತಿ ಮಂಡಳಿಯ ಸಭೆಗಳನ್ನು ಯುಜಿಸಿ ಮಾರ್ಗಸೂಚಿಗಳನ್ವಯ ದಿನಾಂಕ:19-02-2021 ಹಾಗೂ 20-02-2021 ರಂದು ಏರ್ಪಡಿಸಲಾಗಿದ್ದು, ವಿವಿಧ ವಿಷಯಗಳ ಬಿಓಎ ಸಭೆಗಳ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಈ ಕೆಳಗಿನಂತೆ ಅನುಮೋದಿಸಿತು.

| ಕ್ರ ಸಂ | ಅಧ್ಯಾಪಕ ಹೆಸರು ಪ್ರೊ./ಡಾ./ಶ್ರೀ/ಶ್ರೀಮತಿ | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಅರ್ಹತಾ ದಿನಾಂಕ | ಶಿಫಾರಸ್ಸು ಮಾಡಿದ ದಿನಾಂಕ |
|---|---|---|---|---|---|---|
| 01 | ಪ್ರಭಾಕರ ಸಿ.ಜೆ | ಎಂಸಿಎ/ ಕಂಪ್ಯೂಟರ್ ಸೈನ್ಸ್ | ಸಹ ಪ್ರಾಧ್ಯಾಪಕರು ಎ.ಜಿ.ಪಿ - 9000 | ಪ್ರಾಧ್ಯಾಪಕರು ಎ.ಜಿ.ಪಿ - 10000 | 29-03-2020 | 29-03-2020 |
| 02 | ಜಗದಾಳೆ ಬಿ.ಎನ್ | ಎಲೆಕ್ಟ್ರಾನಿಕ್ಸ್ | ಸಹಾಯಕ ಪ್ರಾಧ್ಯಾಪಕರು ಎ.ಜಿ.ಪಿ - 8000 | ಸಹ ಪ್ರಾಧ್ಯಾಪಕರು ಎ.ಜಿ.ಪಿ - 9000 | 27-07-2020 | 27-07-2020 |
| 03 | ಬಿನಾಯ್, ಟಿ.ಎ., | ಪ್ರವಾಸೋದ್ಯಮ | ಸಹಾಯಕ ಪ್ರಾಧ್ಯಾಪಕರು ಎ.ಜಿ.ಪಿ - 8000 | ಸಹ ಪ್ರಾಧ್ಯಾಪಕರು ಎ.ಜಿ.ಪಿ - 9000 | 29-07-2020 | 29-07-2020 |
| 04 | ಮಂಜುನಾಥ, ಕೆ.ಆರ್. | ನಿರ್ವಹಣಾಶಾಸ್ತ್ರ | ಸಹಾಯಕ ಪ್ರಾಧ್ಯಾಪಕರು ಎ.ಜಿ.ಪಿ - 8000 | ಸಹ ಪ್ರಾಧ್ಯಾಪಕರು ಎ.ಜಿ.ಪಿ - 9000 | 27-07-2020 | 27-07-2020 |
| 05 | ರವೀಂದ್ರನಾಥ ಎನ್. ಕದಂ | ಅರ್ಥಶಾಸ್ತ್ರ | ಪ್ರಾಧ್ಯಾಪಕ ವೃಂದದ ವೃತ್ತಿ ಪದೋನ್ನತಿ ದಿನಾಂಕ ಬದಲಾವಣೆ | The board resolved that the case of Prof.Ravindranath N Kadam is out of the purview of the BOA. Hence this matter may be resolved by the University Administration either by seeking legal opinion or by any other relavent procedures. | | |
| 06 | ವಾಲ್ಮೀಕಿ ಆರ್.ಹೆಚ್ | ಗ್ರಂಥಾಲಯ | ಉಪಗ್ರಂಥಪಾಲಕರು | ಗ್ರಂಥಪಾಲಕರು | 01-07-2016 | 01-07-2016 |
| 07 | ಧರಣಿಕುಮಾರ್ | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | ಸಹಾಯಕ ಪ್ರಾಧ್ಯಾಪಕರು ಎ.ಜಿ.ಪಿ - 8000 | ಸಹ ಪ್ರಾಧ್ಯಾಪಕರು ಎ.ಜಿ.ಪಿ - 9000 | 11-10-2019 | 11-10-2019 |
| 08 | ಗಜಾನನ ಪ್ರಭು | ದೈಹಿಕ ಶಿಕ್ಷಣ | ಸಹಾಯಕ ಪ್ರಾಧ್ಯಾಪಕರು ಎ.ಜಿ.ಪಿ - 8000 | ಸಹ ಪ್ರಾಧ್ಯಾಪಕರು ಎ.ಜಿ.ಪಿ - 9000 | 30-12-2020 | 30-12-2020 |
| 09 | ಚಂದ್ರಶೇಖರ್ ಈ. | ಸಮಾಜಶಾಸ್ತ್ರ | ಸಹ ಪ್ರಾಧ್ಯಾಪಕರು ಎ.ಜಿ.ಪಿ - 9000 | ಪ್ರಾಧ್ಯಾಪಕರು ಎ.ಜಿ.ಪಿ - 10000 | 06-01-2021 | 06-01-2021 |
| 10 | ಗೀತಾ ಸಿ | ಶಿಕ್ಷಣ | ಸಹ ಪ್ರಾಧ್ಯಾಪಕರು ಎ.ಜಿ.ಪಿ - 9000 | ಪ್ರಾಧ್ಯಾಪಕರು ಎ.ಜಿ.ಪಿ - 10000 | 13-01-2021 | 13-01-2021 |
| 11 | ಜಗನ್ನಾಥ ಕೆ. ಡಾಂಗೆ | ಶಿಕ್ಷಣ | ಸಹ ಪ್ರಾಧ್ಯಾಪಕರು ಎ.ಜಿ.ಪಿ - 9000 | ಪ್ರಾಧ್ಯಾಪಕರು ಎ.ಜಿ.ಪಿ - 10000 | 06-02-2021 | 06-02-2021 |
| 12 | ಸತ್ಯಪ್ರಕಾಶ್ ಎಂ.ಆರ್ | ಪತ್ರಿಕೋದ್ಯಮ ಮತ್ತು ಸಮೂಹ ಸಂಹವನ ವಿಭಾಗ | ಸಹಾಯಕ ಪ್ರಾಧ್ಯಾಪಕರು ಎ.ಜಿ.ಪಿ - 8000 | ಸಹ ಪ್ರಾಧ್ಯಾಪಕರು ಎ.ಜಿ.ಪಿ - 9000 | 28-07-2020 | 28-07-2020 |



Scanned with CamScanner

**2021–ಸಿಂ–2.07:** ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡುವ ಕುರಿತು.

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು, ಈ ಹಿಂದೆ ಶ್ರೀ ತಿಲಕ್ ಪ್ರಸಾದ್ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕ ಮಾಡುವ ಸಂದರ್ಭದಲ್ಲಿ ಖಾಲಿ ಹುದ್ದೆಗಳಿಲ್ಲದಿದ್ದರೂ ಸಹ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ನೇಮಕ ಮಾಡಿಕೊಳ್ಳಲಾಗಿದ್ದು, ಪ್ರಸ್ತುತ ಇವರ ಖಾಯಂಪೂರ್ವ ಸೇವೆಯನ್ನು ತೃಪ್ತಿಕರವೆಂದು ಘೋಷಿಸಬೇಕಾಗಿರುವುದರಿಂದ ವಿಷಯವನ್ನು ಸಿಂಡಿಕೇಟ್ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿರುವುದಾಗಿ ತಿಳಿಸಿದರು. ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ಇವರು ಮಾತನಾಡುತ್ತಾ ಇಂತಹುದೇ ಪ್ರಕರಣದ 371(ಜೆ) ನೌಕರರ ಖಾಯಂ ಪೂರ್ವ ಸೇವಾವಧಿಯನ್ನು ಘೋಷಿಸಲು ಕ್ರಮಕೈಗೊಂಡಿರುವುದರಿಂದ ಅದರಂತೆಯೇ ಇವರ ಖಾಯಂ ಪೂರ್ವ ಅವಧಿ ಘೋಷಿಸಬಹುದು ಎಂದರು.

**ನಿರ್ಣಯ:** ಚರ್ಚೆಯ ನಂತರ ಶ್ರೀ ತಿಲಕ್ ಪ್ರಸಾದ್ ಇವರ ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವೆಂದು ಘೋಷಿಸಲು ನಿರ್ಣಯಿಸಲಾಯಿತು.

**2021–ಸಿಂ–2.08:** ಭ್ರಷ್ಟಾಚಾರ ನಿಗ್ರಹ ದಳವು ಕೋರಿರುವಂತೆ ತನಿಖೆ / ವಿಚಾರಣೆ ಕೈಗೊಳ್ಳಲು ಪೂರ್ವಾನುಮತಿ ನೀಡುವ ಬಗ್ಗೆ.

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರಿಂದ ಬಂದಂತಹ ಪತ್ರವನ್ನು ಸಭೆಯ ಗಮನಕ್ಕೆ ತಂದರು. ಮಾನ್ಯ ಕುಲಪತಿಗಳು ಮಾತನಾಡಿ ಈ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ದಿನಾಂಕ:23–03–2021 ರಂದು ಪತ್ರಿಕಾ ಗೋಷ್ಠಿ ನಡೆಸಿ ಸ್ಪಷ್ಟೀಕರಣವನ್ನು ನೀಡಿರುವುದಾಗಿ ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ಇವರು ಮಾತನಾಡುತ್ತಾ, ಈಗಾಗಲೇ ಪತ್ರಿಕಾಗೋಷ್ಠಿ ಮಾಡಿ ವಿವರಣೆ ನೀಡಿರುವುದರಿಂದ ಮತ್ತೊಮ್ಮೆ ಈ ವಿಷಯದ ಕುರಿತು ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳುವುದು ಸೂಕ್ತವೆಂದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥ ಇವರು ಮಾತನಾಡುತ್ತಾ, ಆನ್–ಲೈನ್ ವೆರಿಫಿಕೇಷನ್ ಕಾರ್ಯವು ಪೂರ್ಣಗೊಂಡಿದೆ ಎಂದು ಧೃಡೀಕರಿಸುವ ಸಕ್ಷಮ ಪ್ರಾಧಿಕಾರ ಯಾವುದು ಎಂದು ಪ್ರಶ್ನಿಸುವುದರೊಂದಿಗೆ ಪತ್ರಿಕಾಗೋಷ್ಠಿಯಲ್ಲಿ ಹೇಳಿರುವ ವಿಷಯಗಳು ಸಿಂಡಿಕೇಟ್ ಸದಸ್ಯರುಗಳಿಗೆ ಅನ್ವಯವಾಗದು ಎಂದರು.

ಕುಲಸಚಿವ(ಮೌಲ್ಯಮಾಪನ) ಇವರು ಮಾತನಾಡುತ್ತಾ, ಸದರಿ ವಿಷಯಕ್ಕೆ ಸಂಬಂಧಿಸಿದ ಕಛೇರಿಯಲ್ಲಿನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿದೆ ಕೆಲಸ ಪೂರ್ಣಗೊಂಡಿದ್ದು, ಹಂತ ಹಂತವಾಗಿ ಹಣ ಪಾವತಿಯಾಗಿರುತ್ತದೆ. ಹಾಗೂ ಈಗಾಗಲೇ ಪತ್ರಿಕಾಗೋಷ್ಠಿಯಲ್ಲಿ ಎಲ್ಲಾ ವಿವರಣೆಯನ್ನು ದಾಖಲೆ ಸಮೇತ ನೀಡಲಾಗಿದೆ ಎಂದರು.

**ನಿರ್ಣಯ:**ಸುಧೀರ್ಘ ಚರ್ಚೆಯ ನಂತರ ಕುಲಸಚಿವ(ಮೌಲ್ಯಮಾಪನ) ಇವರು ಸರ್ಕಾರದ ಪತ್ರದಲ್ಲಿ ಉಲ್ಲೇಖಿಸಿ ಆರೋಪಿಸಿರುವಂತೆ ಆನ್–ಲೈನ್ ವೆರಿಫಿಕೇಷನ್ ಕಾರ್ಯವು ಪೂರ್ಣಗೊಂಡು ಹಂತ ಹಂತವಾಗಿ ಹಣ ಪಾವತಿಯಾಗಿ ಎಲ್ಲಾ ಕಾರ್ಯವು ನಿಯಮಾನುಸಾರವೇ ನಡೆದಿರುವುದೆಂದು ತಿಳಿಸಿರುವುದರಿಂದ ಅದರಂತೆಯೇ ಸರ್ಕಾರಕ್ಕೆ ಪತ್ರ ಬರೆಯಲು ಹಾಗೂ ಭ್ರಷ್ಟಾಚಾರ ನಿಗ್ರಹ ದಳವು ಕೋರಿರುವಂತೆ ತನಿಖೆ / ವಿಚಾರಣೆಗೆ ವಿಶ್ವವಿದ್ಯಾಲಯದ ಅನುಮತಿ ನೀಡದೇ ಇರಲೂ ಸಹ ನಿರ್ಣಯಿಸಲಾಯಿತು.



Scanned with CamScanner

**2021–ಸಿಂ–2.08(ಎ):** ಸಿಬ್ಬಂದಿಗಳ ವೈದ್ಯಕೀಯ ಚಿಕಿತ್ಸೆಗಾಗಿ ವಿಶ್ವವಿದ್ಯಾಲಯದಿಂದ ಖಾಸಗಿ ಆಸ್ಪತ್ರೆಗೆ ಮಾನ್ಯತೆ ನೀಡುವ ಕುರಿತು.

**ನಿರ್ಣಯ:** ಸಿಬ್ಬಂದಿಗಳ ವೈದ್ಯಕೀಯ ಚಿಕಿತ್ಸೆಗಾಗಿ ಆದರ್ಶ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಶಿವಮೊಗ್ಗ– ಈ ಆಸ್ಪತ್ರೆಗೆ ವಿಶ್ವವಿದ್ಯಾಲಯದ ಮಾನ್ಯತೆ ನೀಡಲು ನಿರ್ಣಯಿಸಲಾಯಿತು.

**2021–ಸಿಂ–2.08(ಬಿ):** ವಿಚಾರಣಾ ಸಮಿತಿ ವರದಿ ಕುರಿತು.

**ನಿರ್ಣಯ:** ವಿಷಯವನ್ನು ಚರ್ಚೆಗೆ ಕೈಗೆತ್ತಿಕೊಳ್ಳದೇ ಇದ್ದುದರಿಂದ ಮುಂದೂಡಲಾಯಿತು.

**2021–ಸಿಂ–2.08(ಸಿ):** ವಿಲೀನೀಕರಣಗೊಂಡ ನೌಕರರಿಗೆ ಸೇವಾ ಸೌಲಭ್ಯಗಳನ್ನು ವಿಸ್ತರಿಸುವ ಕುರಿತು.

**ನಿರ್ಣಯ:** ವಿಷಯವನ್ನು ಚರ್ಚೆಗೆ ಕೈಗೆತ್ತಿಕೊಳ್ಳದೇ ಇದ್ದುದರಿಂದ ಮುಂದೂಡಲಾಯಿತು.

**2021–ಸಿಂ–2.08(ಡಿ):** ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್, ಪ್ರಾಧ್ಯಾಪಕರು, ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಮತ್ತು ಶ್ರೀ. ಸೀತಾರಾಮ್ ಎಂ, ಉಪಕುಲಸಚಿವರು, ಸಿಂಡಿಕೇಟ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಇವರ ವಿರುದ್ಧ ದೂರು ಅರ್ಜಿಯ ಕುರಿತು.

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರಿಂದ ಬಂದಂತಹ ಪತ್ರವನ್ನು ಸಭೆಯ ಗಮನಕ್ಕೆ ತರುತ್ತಾ, ಇದರಲ್ಲಿ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್ ಮತ್ತು ಶ್ರೀ ಎಂ. ಸೀತಾರಾಮ್ ಇವರುಗಳ ಹೆಸರುಗಳನ್ನು ಉಲ್ಲೇಖಿಸಿ ಇವರ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳವು ಕೋರಿರುವಂತೆ ತನಿಖೆ / ವಿಚಾರಣೆಗೆ ಅನುಮತಿ ನೀಡುವಂತೆ ಕೋರಿರುವುದನ್ನು ಸಭೆಯ ಗಮನಕ್ಕೆ ತಂದರು. ಹಾಗೂ ಈಗಾಗಲೇ ಈ ಎಲ್ಲಾ ವಿಷಯಗಳ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿಯಲು ಆಂತರಿಕ ಸಮಿತಿಯನ್ನು ರಚಿಸಿರುವುದನ್ನೂ ಸಹ ಸಭೆಗೆ ವಿವರಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಸರ್ಕಾರದ ಪತ್ರದಲ್ಲಿ ಉಲ್ಲೇಖಿಸಿರುವ ವಿಷಯವೂ ಒಳಗೊಂಡಂತೆ ಎಲ್ಲಾ ಪ್ರಕರಣಗಳಿಗೆ ಸಮಿತಿಯನ್ನು ಈಗಾಗಲೇ ರಚಿಸಿರುವುದರಿಂದ ಅದರಂತೆಯೇ ಸರ್ಕಾರಕ್ಕೆ ಪತ್ರ ಬರೆಯಲು ಹಾಗೂ ಭ್ರಷ್ಟಾಚಾರ ನಿಗ್ರಹ ದಳವು ಕೋರಿರುವಂತೆ ತನಿಖೆ / ವಿಚಾರಣೆಗೆ ವಿಶ್ವವಿದ್ಯಾಲಯದ ಅನುಮತಿ ನೀಡದೇ ಇರಲೂ ಸಹ ನಿರ್ಣಯಿಸಲಾಯಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2021–ಸಿಂ–2.09:** ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಔಷಧಿಗಳು ಮತ್ತು ಲ್ಯಾಬ್ ಕೆಮಿಕಲ್ಸ್‌ಗಳನ್ನು ಖರೀದಿ / ದರ ಒಪ್ಪಂದದ ಇ–ಟೆಂಡರ್ ಅನುಮೋದಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯ ಆರೋಗ್ಯ ಕೇಂದ್ರಕ್ಕೆ ಔಷಧಿಗಳು ಮತ್ತು ಇತರೆ ಪರಿಕರಗಳನ್ನು ಖರೀದಿಸುವ ಸಂಬಂಧದ ಇ–ಟೆಂಡರ್ ಅನ್ನು ಅನುಮೋದಿಸಿ ನಿಯಮಾನುಸಾರ ಸಂಬಂಧಪಟ್ಟ ಸಂಸ್ಥೆಯೊಂದಿಗೆ ದರ ಒಪ್ಪಂದ ಮಾಡಿಕೊಳ್ಳಲು ನಿರ್ಣಯಿಸಲಾಯಿತು.

**2021–ಸಿಂ–2.10:** ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಾಲೇಜುಗಳಿಗೆ ಅಗತ್ಯವಿರುವ ಗ್ಲಾಸ್‌ವೇರ್ / ಕೆಮಿಕಲ್ಸ್ / ಮೈನರ್ ಎಕ್ವ್ಯೂಪ್‌ಮೆಂಟ್ಸ್‌ಗಳನ್ನು ಖರೀದಿ ಸಂಬಂಧದ ಇ–ಟೆಂಡರ್ ಅನುಮೋದಿಸುವ ಕುರಿತು.



Scanned with CamScanner

ನಿರ್ಣಯ: ಚರ್ಚೆಯ ನಂತರ ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಾಲೇಜುಗಳಿಗೆ ಅಗತ್ಯವಿರುವ ಗ್ಲಾಸ್‌ವೇರ್ / ಕೆಮಿಕಲ್ಸ್ / ಮೈನರ್ ಎಕ್ವ್ಯೂಪ್‌ಮೆಂಟ್ಸ್‌ಗಳನ್ನು ಖರೀದಿಸುವ ಸಂಬಂಧದ ಇ-ಟೆಂಡರ್ ಅನ್ನು ಅನುಮೋದಿಸಿ ನಿಯಮಾನುಸಾರ ಸಂಬಂಧಪಟ್ಟ ಸಂಸ್ಥೆಯೊಂದಿಗೆ ದರ ಒಪ್ಪಂದ ಮಾಡಿಕೊಳ್ಳಲು ನಿರ್ಣಯಿಸಲಾಯಿತು.

**2021–ಸಿಂ–2.10** (ಎ) ದಿನಾಂಕ:19–03–2021 ರಂದು ನಡೆದ ಖರೀದಿ ಸಮಿತಿ ಸಭೆ ನಡಾವಳಿ ಅನುಮೋದನೆ ಬಗ್ಗೆ.

**ನಿರ್ಣಯ:** ವಿಷಯವನ್ನು ಚರ್ಚೆಗೆ ಕೈಗೆತ್ತಿಕೊಳ್ಳದೇ ಇದ್ದುದರಿಂದ ಮುಂದೂಡಲಾಯಿತು.

## ಹಣಕಾಸು ವಿಭಾಗ

**2021–ಸಿಂ–2.11:** 2020–21ನೇ ಆರ್ಥಿಕ ವರ್ಷದ ದ್ವಿತೀಯ ಹಣಕಾಸು ಸಮತಿ ಸಭೆಯ ನಡಾವಳಿಗಳನ್ನು ಅನುಮೋದನೆ ಕುರಿತು.

**ಚರ್ಚೆ:** ಹಣಕಾಸು ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ದಿನಾಂಕ:16–01–2021 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಮಂಡಿಸಿ ಅನುಮೋದಿಸಲು ಕೋರಿದರು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:16–01–2021 ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

**2021–ಸಿಂ–2.11(ಎ):** 2021–22ನೇ ಆರ್ಥಿಕ ವರ್ಷದ ಆಯ-ವ್ಯಯ ಅಂದಾಜು ಪರಿಶೀಲನೆ ಮತ್ತು ಅನುಮೋದನೆಗಾಗಿ.

**ಚರ್ಚೆ:** ಹಣಕಾಸು ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ 2021–22ನೇ ಆರ್ಥಿಕ ವರ್ಷದ ಆಯ–ವ್ಯಯದ ಅಂದಾಜನ್ನು ಮಂಡಿಸಿದರು. ನಂತರ ಮಾತನಾಡುತ್ತಾ, ಕೋವಿಡ್–19 ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದನ್ನು ತಿಳಿಸಿ ಇವುಗಳನ್ನೆಲ್ಲ ಗಮನದಲ್ಲಿರಿಸಿ ಆಯ–ವ್ಯಯದ ಅಂದಾಜನ್ನು ಸಿದ್ಧಪಡಿಸಲಾಗಿದ್ದು ಇದನ್ನು ಸಭೆಯು ಅನುಮೋದಿಸುವಂತೆ ಕೋರಿದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ 2021–22ನೇ ಆರ್ಥಿಕ ವರ್ಷದ ಆಯ–ವ್ಯಯ ಅಂದಾಜನ್ನು ಸಭೆಯು ಅನುಮೋದಿಸಿತು.

## ಎಸ್ಟೇಟ್ ವಿಭಾಗ

**2021–ಸಿಂ–2.12:** ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಮೆ:ಕೆ.ಎಸ್.ಎಫ್–9, ಬೆಂಗಳೂರು, ಇವರಿಂದ ಪಡೆಯುತ್ತಿರುವ ಕುರಿತು.

**ನಿರ್ಣಯ:** ಈಗಾಗಲೇ ವಿಷಯ ಸಂಖ್ಯೆ 2021–ಸಿಂ–2.04ರಲ್ಲಿ ಕೈಗೊಂಡಿರುವ ನಿರ್ಣಯದಂತೆ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**2021–ಸಿಂ–2.13:** ಕೋವಿಡ್–19ರ ಹಿನ್ನಲೆಯಲ್ಲಿ Pest Control Management Solution & Sanitisation/Disinfectant ಸೇವೆಗಾಗಿ ಅಲ್ಪಾವಧಿಯ ಇ-ಟೆಂಡರ್ ಕರೆದಿರುವ ಕುರಿತು.



Scanned with CamScanner

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು, ಕೋವಿಡ್-19 ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಹಾಗೂ ಘಟಕ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರಗಳಿಗೆ Pest Control Management Solution & Sanitisation / Disinfectant ಸೇವೆಗಾಗಿ ಈ ಹಿಂದಿನ ಸಿಂಡಿಕೇಟ್ ಸಭೆಯು ಗರಿಷ್ಠ 14 ಲಕ್ಷಗಳ ಮಿತಿಯೊಳಗೆ ಅನುಮತಿಯನ್ನು ನೀಡಲಾಗಿತ್ತು. ಆದರೆ ಸದರಿ ಗರಿಷ್ಠ ಮಿತಿಗಿಂತ ಹೆಚ್ಚುವರಿಯಾಗಿ ರೂ.4,97,440 ಗಳನ್ನು ಪಾವತಿಗಾಗಿ ಸಂಸ್ಥೆಯವರು ಹುಂಡಿಯನ್ನು ಸಲ್ಲಿಸಿದ್ದು ಇದರ ಪಾವತಿಯ ಅನುಮೋದನೆಗಾಗಿ ಮಂಡಿಸಿರುವುದಾಗಿ ಸಭೆಗೆ ವಿವರಿಸಿದರು.

ಪ್ರಸ್ತಾವನೆಗೆ ಸದಸ್ಯರುಗಳಾದ ಶ್ರೀ ಜಿ. ಧರ್ಮಪ್ರಸಾದ್, ಶ್ರೀ ಬಿ. ನಿರಂಜನಮೂರ್ತಿ, ಶ್ರೀ ಹೆಚ್. ರಾಮಲಿಂಗಪ್ಪ, ಶ್ರೀ ಹೆಚ್.ಬಿ. ರಮೇಶ್‌ಬಾಬು, ಶ್ರೀ ಬಳ್ಳೆಕೆರೆಸಂತೋಷ್, ಶ್ರೀ ಎನ್.ಆರ್. ಮಂಜುನಾಥ ಹಾಗೂ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ ಇವರುಗಳು ಮಾರ್ಚ್-2021ರ ಮಾಹೆಯವರೆಗೆ ಮಾತ್ರ ಸದರಿಯವರ ಸೇವೆಯನ್ನು ಪಡೆದು ನಂತರ ಟೆಂಡರನ್ನು ರದ್ದುಪಡಿಸಿ ಈ ಹಿಂದಿನಂತೆಯೇ ವಿಶ್ವವಿದ್ಯಾಲಯದ ವತಿಯಿಂದಲೇ ಕೊರೋನಾ ತಡೆ ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

**ನಿರ್ಣಯ:**ಸುಧೀರ್ಘ ಚರ್ಚೆಯ ನಂತರ ಸದರಿ ಸಂಸ್ಥೆಯು ಕಾರ್ಯನಿರ್ವಹಿಸಿದ ಅವಧಿಯಲ್ಲಿ ಪಾವತಿಸಬೇಕಾದ ಬಾಕಿ ಮೊತ್ತವನ್ನು ಪಾವತಿಸಿ ಟೆಂಡರನ್ನು ರದ್ದುಪಡಿಸಿ ಏಪ್ರಿಲ್-2021 ರ ಮಾಹೆಯಿಂದ ವಿಶ್ವವಿದ್ಯಾಲಯದ ವತಿಯಿಂದಲೇ ಕೋವಿಡ್-19 ತಡೆ ನಿರ್ವಹಣೆಗೆ ಅಗತ್ಯ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

## ಪರೀಕ್ಷಾ ವಿಭಾಗ

**2021-ಸಿಂ-2.14:** ಪರೀಕ್ಷಾ ವಿಭಾಗದಲ್ಲಿ ಇರುವಂತಹ ಅವಧಿ ಮುಗಿದ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆಗಳನ್ನು ಹಾಗೂ ಇನ್ನಿತರೆ ಅನುಪಯುಕ್ತ ಕಾಗದ ಪತ್ರಗಳ ವಿಲೇವಾರಿಗೆ ಸಂಬಂಧಿಸಿದ ಟೆಂಡರ್‌ನ ಅನುಮೋದನೆ ಕುರಿತು.

**ನಿರ್ಣಯ:** ಅವಧಿ ಮುಗಿದ ಮೌಲ್ಯಮಾಪನಗೊಂಡ ಉತ್ತರ ಪತ್ರಿಕೆ ಹಾಗೂ ಇನ್ನಿತರೆ ಅನುಪಯುಕ್ತ ಪತ್ರಗಳ ವಿಲೇವಾರಿಗೆ ಸಂಬಂಧಿಸಿದ ಟೆಂಡರ್ ಅನುಮೋದಿಸಿ ನಿಯಮಾನುಸಾರ ದರ ಒಪ್ಪಂದ ಕರಾರು ಮಾಡಿಕೊಳ್ಳಲು ನಿರ್ಣಯಿಸಲಾಯಿತು.

**2021-ಸಿಂ-2.15:** ದೂರಶಿಕ್ಷಣದ ಸ್ನಾತಕ / ಸ್ನಾತಕೋತ್ತರ / ಡಿಪ್ಲೋಮಾ / ಪಿ.ಜಿ. ಡಿಪ್ಲೋಮಾ ಮತ್ತು ಇತರೆ ಕೋರ್ಸುಗಳ ಎರಡುಪಟ್ಟು ಅವಧಿಯಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಿರುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಪ್ರಸ್ತಾವನೆಯನ್ನು ಅನುಮೋದಿಸಿ ಹಾಲಿ ಚಾಲ್ತಿಯಲ್ಲಿರುವ ದಂಡಶುಲ್ಕವನ್ನು ರೂ.3960-00 ರ ಬದಲಿಗೆ ರೂ.5000-00 ಗಳಿಗೆ ನಿಗದಿಪಡಿಸಲು ನಿರ್ಣಯಿಸಲಾಯಿತು.

**2021-ಸಿಂ-2.16:** ರೆಗ್ಯೂಲರ್ ಮತ್ತು ದೂರಶಿಕ್ಷಣದ ವಿವಿಧ ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳಿಗೆ ಸಂಬಂಧಿಸಿದ ಶುಲ್ಕಗಳನ್ನು ಪರಿಷ್ಕರಿಸುವ ಕುರಿತು.

**ಚರ್ಚೆ:**ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವ (ಮೌಲ್ಯಮಾಪನ) ಇವರು ಕೋವಿಡ್-19 ಕಾರಣಗಳಿಂದ ಕಳೆದ ವರ್ಷದಲ್ಲಿ ವಿದ್ಯಾರ್ಥಿಗಳ ಶುಲ್ಕವನ್ನು ಸರ್ಕಾರದ ಆದೇಶದಂತೆ



Scanned with CamScanner

ಪರಿಷ್ಕರಿಸಿರುವುದಿಲ್ಲ. ಆದರೆ 2021–22 ನೇ ಸಾಲಿಗೆ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಶುಲ್ಕಗಳನ್ನು ಪರಿಷ್ಕರಿಸುವುದು ಅವಶ್ಯ ಮತ್ತು ಅನಿವಾರ್ಯವಾಗಿದೆಯೆಂದು ಸಭೆಗೆ ತಿಳಿಸಿ ಇದನ್ನು ಅನುಮೋದಿಸುವಂತೆ ಸಭೆಯನ್ನು ಕೋರಿದರು.

**ನಿರ್ಣಯ:**ಚರ್ಚೆಯ ನಂತರ ರೆಗ್ಯೂಲರ್ ಮತ್ತು ದೂರಶಿಕ್ಷಣದ ವಿವಿಧ ಸ್ನಾತಕ / ಸ್ನಾತಕೋತ್ತರ ಪರೀಕ್ಷೆಗಳಿಗೆ ಸಂಬಂಧಿಸಿದ ಶುಲ್ಕಗಳನ್ನು 2021–22 ನೇ ಸಾಲಿನಿಂದ ಶೇ.10 ರಷ್ಟು ಹೆಚ್ಚಿಸಿ ಪರಿಷ್ಕರಿಸಲು ನಿರ್ಣಯಿಸಲಾಯಿತು.

**2021–ಸಿಂ–2.17:** ದಿನಾಂಕ:17–12–2020 ರಂದು ನಡೆದ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

**ಚರ್ಚೆ:**ಪ್ರಸ್ತಾವನೆಯನ್ನು ಮಂಡಿಸಿ ಮಾತನಾಡಿದ ಕುಲಸಚಿವ (ಮೌಲ್ಯಮಾಪನ) ಇವರು ಇದೊಂದು ಸಾಮಾನ್ಯ ಪ್ರಕ್ರಿಯೆಯಾಗಿದ್ದು ನಿಯಮಾನುಸಾರ ಸಮಿತಿಯು ಕ್ರಮಕೈಗೊಂಡಿರುವುದರಿಂದ ಇದನ್ನು ಅನುಮೋದಿಸಲು ಸಭೆಯನ್ನು ಕೋರಿದರು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:17–12–2020 ರಂದು ನಡೆದ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸಿ ನಿರ್ಣಯಿಸಲಾಯಿತು.

## ಅಭಿವೃದ್ಧಿ ವಿಭಾಗ

**2021–ಸಿಂ–2.18:** ಸಂಪನ್ಮೂಲ ವ್ಯಕ್ತಿಗಳಿಗೆ ಗೌರವ ಸಂಭಾವನೆಯನ್ನು ಹೆಚ್ಚಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದಲ್ಲಿ ಸಮ್ಮೇಳನ/ಕಾರ್ಯಗಾರ/ವಿಶೇಷ ಉಪನ್ಯಾಸ/ಕಮ್ಮಟ ಕಾರ್ಯಕ್ರಮಗಳಿಗೆ ಆಗಮಿಸುವ ಸಂಪನ್ಮೂಲ ವ್ಯಕ್ತಿಗಳ ಗೌರವ ಸಂಭಾವನೆಯನ್ನು ರೂ.1000–00ದಿಂದ ರೂ.2000–00ಗಳಿಗೆ ಮತ್ತು ಹೊರದೇಶದ ಸಂಪನ್ಮೂಲ ವ್ಯಕ್ತಿಗಳಿಗೆ ರೂ.2000–00ದಿಂದ ರೂ.3000–00ಗಳಿಗೆ ಹೆಚ್ಚಿಸಿ ಪರಿಷ್ಕರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**2021–ಸಿಂ–2.19:** ಶೈಕ್ಷಣಿಕ ಹಾಗೂ ಸಂಶೋಧನಾ ಅಭಿವೃದ್ಧಿಗಾಗಿ Kirloskar Institute of Advanced Mangement Studies Harihara – ಇವರೊಂದಿಗೆ ವಿಶ್ವವಿದ್ಯಾಲಯದ ಎಂ.ಬಿ.ಎ ವಿಭಾಗ ಒಡಂಬಡಿಕೆ (MoU) ಮಾಡಿಕೊಳ್ಳುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಶೈಕ್ಷಣಿಕ ಹಾಗೂ ಸಂಶೋಧನಾ ಅಭಿವೃದ್ಧಿಗಾಗಿ Kirloskar Institute of Advanced Mangement Studies Harihara – ಇವರೊಂದಿಗೆ ವಿಶ್ವವಿದ್ಯಾಲಯದ ಎಂ.ಬಿ.ಎ ವಿಭಾಗ ಒಡಂಬಡಿಕೆ (MoU) ಮಾಡಿಕೊಳ್ಳಲು ನಿರ್ಣಯಿಸಲಾಯಿತು.

**2021–ಸಿಂ–2.20:** ಅಧ್ಯಯನ ಪೀಠದ ಪದನಾಮವನ್ನು ಬದಲಾಯಿಸುವ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ ರಾಷ್ಟ್ರಕವಿ ಕುವೆಂಪು ಅಧ್ಯಯನ ಪೀಠವನ್ನು ರಾಷ್ಟ್ರಕವಿ ಕುವೆಂಪು ಅಧ್ಯಯನ ಕೇಂದ್ರವೆಂದು ಬದಲಾಯಿಸಲು ಹಾಗೂ ಅವಶ್ಯವೆನಿಸಿದಲ್ಲಿ ಇದಕ್ಕೆ ಪ್ರತ್ಯೇಕವಾದ ಲಾಂಛನವನ್ನು ಗುರುತಿಸಲು ಸಹ ನಿರ್ಣಯಿಸಲಾಯಿತು.



Scanned with CamScanner

## ದೂರಶಿಕ್ಷಣ ನಿರ್ದೇಶನಾಲಯ

**2021–ಸಿಂ–2.21:** 2019–20ನೇ ಶೈಕ್ಷಣಿಕ ಸಾಲಿನ ಪ್ರಥಮ, ದ್ವಿತೀಯ ಆವೃತ್ತಿಗಳ ಪ್ರಥಮ ವರ್ಷದ/ದ್ವಿತೀಯ ಮತ್ತು ತೃತೀಯ ವರ್ಷದ ಪ್ರವೇಶಾತಿಗೆ ಸಂಬಂಧಿಸಿದಂತೆ ಕೋವಿಡ್–19ರ ಹಿನ್ನಲೆಯಲ್ಲಿ ದಂಡ ಶುಲ್ಕ ಮನ್ನಾ ಹಾಗೂ ಷೇರು ಮೊತ್ತ ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಕೋವಿಡ್–19 ರ ಹಿಣ್ನೆಲೆಯಲ್ಲಿ 2019–20ನೇ ಶೈಕ್ಷಣಿಕ ಸಾಲಿನ ಜುಲೈ–2019ರ ಪ್ರಥಮ ಆವೃತ್ತಿ ಹಾಗೂ ಜನವರಿ 2020ರ ದ್ವಿತೀಯ ಆವೃತ್ತಿಗಳ ಪ್ರಥಮ ವರ್ಷದ ಎಲ್ಲಾ ಸ್ನಾತಕ/ಸ್ನಾತಕೋತ್ತರ ಹಾಗೂ ಡಿಪ್ಲೊಮಾ ಪದವಿಗಳ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಯನ ಕೇಂದ್ರ/ವಿದ್ಯಾರ್ಥಿ ಕಲಿಕಾ ಕೇಂದ್ರಗಳಿಗೆ ವಿಧಿಸಿರುವ ಎಲ್ಲಾ ದಂಡ ಶುಲ್ಕಗಳನ್ನು ಮನ್ನಾ ಮಾಡಲು ಹಾಗೂ ಅಧ್ಯಯನ ಕೇಂದ್ರಗಳಿಗೆ ಪಾವತಿಸಬೇಕಾಗಿರುವ ಷೇರು ಮೊತ್ತವನ್ನು ಬಾಕಿ ಶುಲ್ಕದ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಅನುಮೋದನೆ ಕೋರಿದೆ ಎಂದರು. ಇದಕ್ಕೆ ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪರವರು ಆಕ್ಷೇಪಣೆ ವ್ಯಕ್ತಪಡಿಸಿದರು. ಆದರೆ ಮಾನ್ಯ ಕುಲಪತಿಗಳು ಕೋವಿಡ್–19 ರ ಹಿನ್ನೆಲೆಯಲ್ಲಿ ಈ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ಕ್ರಮ ಕೈಗೊಳ್ಳಲಾಗಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಕೋವಿಡ್–19 ಹಿನ್ನೆಲೆಯಲ್ಲಿ ದಂಡ ಶುಲ್ಕ ಮನ್ನಾ ಹಾಗೂ ಷೇರು ಮೊತ್ತ ಹೊಂದಾಣಿಕೆ ಮಾಡಿಕೊಂಡಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಲಾಯಿತು.

**2021–ಸಿಂ–2.22:** 2020–21ನೇ ಶೈಕ್ಷಣಿಕ ಸಾಲಿನಿಂದ ದೂರಶಿಕ್ಷಣ ನಿರ್ದೇಶನಾಲಯದಿಂದ E-Platform ಮೂಲಕ Online ಪದವಿ ಶಿಕ್ಷಣ ಪ್ರಕ್ರಿಯೆ ಕೈಗೊಳ್ಳಲು ಟೆಂಡರ್ ಪಡೆದುಕೊಂಡ ಸಂಸ್ಥೆಗೆ ಅನುಮೋದನೆ ನೀಡುವ ಕುರಿತು.

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು, ಕರ್ನಾಟಕ ರಾಜ್ಯ ಸರ್ಕಾರವು ದೂರಶಿಕ್ಷಣವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಮಾತ್ರ ನಡೆಸಬೇಕು ಎಂದು ಆದೇಶಿಸಿರುವ ಹಿನ್ನೆಲೆಯಲ್ಲಿ ಪ್ರಸ್ತುತ ವಿಶ್ವವಿದ್ಯಾಲಯವು ದೂರಶಿಕ್ಷಣದಿಂದ ಪ್ರವೇಶಾತಿಯನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ. ಆದರೆ ಯುಜಿಸಿಯು ಎನ್.ಐ.ಆರ್.ಎಫ್ ನಲ್ಲಿ ನೂರರೊಳಗಿನ ಶ್ರೇಣಿಯನ್ನು ಹೊಂದಿರುವ ವಿಶ್ವವಿದ್ಯಾಲಯಗಳಿಗೆ ಆನ್–ಲೈನ್ ಕೋರ್ಸನ್ನು ಪ್ರಾರಂಭಿಸಲು ಅವಕಾಶ ನೀಡಿರುವುದರಿಂದ ಅದರಂತೆ ಈಗಾಗಲೇ ಸಿಂಡಿಕೇಟ್ ಸಭೆಯ ಅನುಮತಿಯನ್ನು ಪಡೆದು ಅರ್ಜಿಯನ್ನು ಸಲ್ಲಿಸಿದ್ದು ಯುಜಿಸಿಯು ವಿಶ್ವವಿದ್ಯಾಲಯದ ಅರ್ಜಿಯನ್ನು ಮಾನ್ಯ ಮಾಡಿ ದೂರಶಿಕ್ಷಣ ಕೋರ್ಸನ್ನು ಆನ್–ಲೈನ್ ನಲ್ಲಿ ಪ್ರಾರಂಭಿಸಲು ಅನುಮೋದನೆಯನ್ನು ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ ಆನ್–ಲೈನ್ ಕೋರ್ಸಿನ ಪ್ರಕ್ರಿಯೆಯನ್ನು E-Platform ಮೂಲಕ ಕೈಗೊಳ್ಳಲು ಇ–ಟೆಂಡರ್ ಆಹ್ವಾನಿಸಲಾಗಿದ್ದು ಅದರಲ್ಲಿ ಅರ್ಹರಾದ ಸಂಸ್ಥೆಗೆ ಅನುಮೋದನೆ ಪಡೆಯಲು ಸಿಂಡಿಕೇಟ್ ಸಭೆಗೆ ಮಂಡಿಸಿರುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್‌ಬಾಬು ಇವರು ಮಾತನಾಡುತ್ತಾ, ಆನ್–ಲೈನ್ ಪ್ರವೇಶಾತಿಯ ನಂತರದ ಪ್ರಕ್ರಿಯೆಯಾದ ಪರೀಕ್ಷೆ, ಮೌಲ್ಯಮಾಪನ ಇವುಗಳನ್ನೂ ಸಹ ಈ ಸಂಸ್ಥೆಗೆ ವಹಿಸಲಾಗುತ್ತದೆಯೇ ಎಂಬ ವಿವರವನ್ನು ನೀಡುವಂತೆ ಕೋರಿದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಪ್ರಸ್ತುತ ಪ್ರವೇಶಾತಿಯನ್ನು ಮತ್ತು ಬೋಧನೆ ಮಾತ್ರ ಈ ಸಂಸ್ಥೆಗೆ ವಹಿಸಲಾಗುವುದು



Scanned with CamScanner

ಎಂದರು. ಹಾಗೂ ಈಗಾಗಲೇ ಇರುವ ಅಧ್ಯಯನ ಕೇಂದ್ರಗಳಲ್ಲಿ ಅರ್ಹರಿರುವ ಕೇಂದ್ರಗಳ ಮೂಲಕ ಪ್ರವೇಶ ಕಾರ್ಯಕ್ಕೆ ಅವಕಾಶ ನೀಡಲಾಗುವುದು ಎಂದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ಇವರು ಮಾತನಾಡುತ್ತಾ, ಈಗಿರುವ ಅಧ್ಯಯನ ಕೇಂದ್ರಗಳಲ್ಲಿ ನಿಯಮಾನುಸಾರ ಅರ್ಹತೆ ಪಡೆದು ಪರೀಕ್ಷೆ ನಡೆಸಲು ಸೂಕ್ತವೆಂದು ಕಂಡುಬರುವ ಕೇಂದ್ರಗಳಿಗೆ ಮಾತ್ರ ಪರೀಕ್ಷೆ ನಡೆಸಲು ಅನುಮತಿ ನೀಡುವುದು ಒಳ್ಳೆಯದು ಎಂದರು.

ಶ್ರೀ ಹೆಚ್.ಬಿ. ರಮೇಶ್ ಬಾಬು ಇವರು ಮಾತನಾಡುತ್ತಾ, ಅಧ್ಯಯನ ಕೇಂದ್ರಗಳ ಬಗ್ಗೆ ಯಾವುದೇ ಒತ್ತಡ ಅಥವಾ ಯಾವುದೇ ರಾಜಿಗೆ ಒಳಗಾಗದೇ ಕಟ್ಟುನಿಟ್ಟಾಗಿ ವ್ಯವಸ್ಥಿತವಾದ ಸೌಲಭ್ಯಗಳನ್ನು ಹೊಂದಿರುವ ಕೇಂದ್ರಗಳಿಗೆ ಮಾತ್ರ ಅವಕಾಶ ಕಲ್ಪಿಸಬೇಕೆಂದರು. ಹಾಗೂ ಈ ಸಂಸ್ಥೆಗೆ ನೀಡುವುದರಿಂದ ವಿಶ್ವವಿದ್ಯಾಲಯಕ್ಕೆ ಆಗುವ ಆರ್ಥಿಕ ಹೊರೆಯ ಬಗ್ಗೆ ಮಾಹಿತಿ ನೀಡಲು ಕೋರಿದರು. ಇದಕ್ಕೆ ಉತ್ತರಿಸಿದ ಕುಲಸಚಿವರು ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಿರುವುದಿಲ್ಲ. ವಿದ್ಯಾರ್ಥಿಗಳ ಪ್ರವೇಶಾತಿಯ ಸಂಖ್ಯೆಯನ್ನಾಧರಿಸಿ ವಿಶ್ವವಿದ್ಯಾಲಯ ಮತ್ತು ಟೆಂಡರ್‌ದಾರರಿಗೆ 52:48 ರ ಪ್ರಮಾಣದಲ್ಲಿ ಆದಾಯವು ಹಂಚಿಕೆಯಾಗುವುದು ಎಂದರು,

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥ – ಇವರು ಮಾತನಾಡುತ್ತಾ, ಆನ್–ಲೈನ್ ಪರೀಕ್ಷೆಗಳನ್ನು ನಡೆಸಲೆಂದೇ ಕೆಲವು ಖಾಸಗಿ ಉನ್ನತ ಸಂಸ್ಥೆಗಳಿದ್ದು ಅವುಗಳನ್ನು ಸಂಪರ್ಕಿಸಿ ಅವರ ಸಹಕಾರ ಪಡೆದು ನಡೆಸಲು ಕ್ರಮಕೈಗೊಳ್ಳುವುದು ಸೂಕ್ತವೆಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿ ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಯಾವುದೇ ಧಕ್ಕೆಯಾಗದ ರೀತಿಯಲ್ಲಿ ಒಂದು ಮಾನದಂಡವನ್ನು ಅಳವಡಿಸಿಕೊಂಡು ಮುಂದುವರೆಯುವಂತೆ ಸಲಹೆ ನೀಡಿದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ 2020–21ನೇ ಶೈಕ್ಷಣಿಕ ಸಾಲಿನಿಂದ ದೂರಶಿಕ್ಷಣ ನಿರ್ದೇಶನಾಲಯದ ವತಿಯಿಂದ E-Platform ಮೂಲಕ Online ಪದವಿ ಶಿಕ್ಷಣ ಪ್ರಕ್ರಿಯೆ ಕೈಗೊಳ್ಳಲು ಟೆಂಡರ್ ಪಡೆದುಕೊಂಡ ಸಂಸ್ಥೆಗೆ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

## ಶೈಕ್ಷಣಿಕ ವಿಭಾಗ

**2021–ಸಿಂ–2.23 :** "ಪ್ರೊ. ಶೇರಿಗಾರ, ವಿಶ್ರಾಂತ ಕುಲಪತಿಗಳು ಹಾಗೂ ನಿವೃತ್ತ ಪ್ರಾಧ್ಯಾಪಕರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ" ಇವರ ಹೆಸರಿನಲ್ಲಿ ದತ್ತಿನಿಧಿ ಉಪನ್ಯಾಸ ಮಾಲಿಕೆಯನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ "ಪ್ರೊ. ಶೇರಿಗಾರ, ವಿಶ್ರಾಂತ ಕುಲಪತಿಗಳು ಹಾಗೂ ನಿವೃತ್ತ ಪ್ರಾಧ್ಯಾಪಕರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ" ಇವರ ಹೆಸರಿನಲ್ಲಿ ದತ್ತಿನಿಧಿ ಉಪನ್ಯಾಸ ಮಾಲಿಕೆಯನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಅನುಮೋದಿಸಲಾಯಿತು.



Scanned with CamScanner

**2021–ಸಿಂ–2.23(ಎ):**ಸೆಂಟ್ರಲ್ ಕಾಫಿ ರೀಸರ್ಚ್ ಇನ್‌ಸ್ಟಿಟ್ಯೂಟ್, ಬಾಳೆಹೊನ್ನೂರು – ಈ ಸಂಸ್ಥೆಯ "ಅನ್ವಯಿಕ ಪ್ರಾಣಿಶಾಸ್ತ್ರ ಮತ್ತು ಅನ್ವಯಿಕ ಸಸ್ಯಶಾಸ್ತ್ರ" ವಿಭಾಗಗಳ ಸಂಶೋಧನಾ ಕೇಂದ್ರದ ಮಾನ್ಯತೆ ನವೀಕರಣ ಕುರಿತು.

**ನಿರ್ಣಯ:** ವಿಷಯವನ್ನು ಚರ್ಚೆಗೆ ಕೈಗೆತ್ತಿಕೊಳ್ಳದೇ ಇದ್ದುದರಿಂದ ಮುಂದೂಡಲಾಯಿತು.

**ಕಾಲೇಜು ಅಭಿವೃದ್ಧಿ ಪರಿಷತ್**

**2021–ಸಿಂ–2.24:**2020–21ನೇ ಸಾಲಿನ ಕಾಲೇಜುಗಳ ಆನ್‌ಲೈನ್ ಸಂಯೋಜನೆ ವರದಿಗಳನ್ನು ಅನುಮೋದನೆಗೆ ಮಂಡಿಸುವ ಬಗ್ಗೆ.

ನಿರ್ಣಯ: ಚರ್ಚೆಯ ನಂತರ 2020–21ನೇ ಸಾಲಿನ ಕಾಲೇಜುಗಳ ಆನ್‌ಲೈನ್ ಸಂಯೋಜನೆ ವರದಿಗಳನ್ನು ಅನುಮೋದಿಸಲಾಯಿತು.

**2020–ಸಿಂ–1.24: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

--

**2020–ಸಿಂ–1.25: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು :**

1) **ಶ್ರೀ ಹೆಚ್.ಬಿ. ರಮೇಶ್ ಬಾಬು ಇವರು ಪ್ರಸ್ತಾಪಿದ ವಿಷಯ:**

**ಚರ್ಚೆ:** ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್ ಬಾಬು ಇವರು ಮಾತನಾಡುತ್ತಾ, ಅಧ್ಯಾಪಕೇತರ ಸಿಬ್ಬಂದಿಗಳಿಗೆ ಈಗಾಗಲೇ ಬಡ್ತಿಯನ್ನು ನೀಡಲಾಗಿದ್ದು ಇವರುಗಳಿಗೆ ವೇತನ ನಿಗದೀಕರಣ ಮಾಡದೇ ಇರುವುದನ್ನು ಪ್ರಸ್ತಾಪಿಸಿ ಈ ಹಿಂದಿನ ಸಭೆಯಲ್ಲಿಯೇ ಸಭಾಧ್ಯಕ್ಷರು ರೂಲಿಂಗ್ ನೀಡಿದ್ದು ಕೂಡಲೇ ಅದನ್ನು ಜಾರಿಗೊಳಿಸಿ ವೇತನ ನಿಗದೀಕರಣ ಮಾಡುವಂತೆ ಕೋರಿದರು.

ಇದಕ್ಕೆ ಉತ್ತರಿಸಿದ ಕುಲಸಚಿವರು ಈ ಹಿಂದಿನ ಸಭಾ ನಡಾವಳಿಯಂತೆ ಕ್ರಮಕೈಗೊಳ್ಳಲು ಕಡತ ಮಂಡಿಸಲಾಗಿ ಮಾನ್ಯ ಕುಲಪತಿಗಳು ಡಿ.ಪಿ.ಸಿ ಸಭೆಯನ್ನು ಕರೆಯುವಂತೆ ಆದೇಶಿಸಿರುವುದನ್ನು ಸಭೆಯ ಗಮನಕ್ಕೆ ತಂದು ಈಗಾಗಲೇ ಸಭೆಯನ್ನು ಕರೆಯಲಾಗಿದೆ ಎಂದರು. ಮಾನ್ಯ ಕುಲಪತಿಗಳು ಮಾತನಾಡುತ್ತಾ, ದಿನಾಂಕ:31–03–2021 ರಂದು ಡಿ.ಪಿ.ಸಿ ಸಭೆಯನ್ನು ಏರ್ಪಡಿಸಲಾಗಿದ್ದು ಸಭೆಯ ನಂತರ ವೇತನ ನಿಗದೀಕರಣಕ್ಕೆ ಕ್ರಮಕೈಗೊಳ್ಳಲಾಗುವುದು ಎಂದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪ ಇವರು ಮಾತನಾಡುತ್ತಾ, ಡಿ.ಪಿ.ಸಿ ಸಭೆಯನ್ನು ಬಡ್ತಿಗಿಂತ ಮೊದಲು ಕರೆಯಬೇಕು ಅಲ್ಲದೇ ಪಟ್ಟಿಯನ್ನು ಅಂತರ್ಜಾಲದಲ್ಲಿ ಪ್ರಕಟಿಸಿದ ಮೇಲೆ ಬದಲಾವಣೆಗೆ ಅವಕಾಶವಿರುವುದಿಲ್ಲವೆಂದು ಜ್ಯೇಷ್ಠತಾ ಪಟ್ಟಿಯ ಪರಿಣಿತರೇ ತಿಳಿಸಿರುವುದಾಗಿ ಸಭೆಗೆ ವಿವರಿಸಿ ಬಡ್ತಿಯನ್ನು 2018ರಲ್ಲಿ ನೀಡಲಾಗಿದ್ದು ಕೂಡಲೇ ವೇತನ ನಿಗದೀಕರಣ ಮಾಡುವುದು ಸೂಕ್ತವೆಂದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್ ಬಾಬು ಇವರು ಮಾತನಾಡುತ್ತಾ, ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ರೂಲಿಂಗ್ ನೀಡಿದ ಮೇಲೆ ಡಿ.ಪಿ.ಸಿ ಅಗತ್ಯವಿದೆಯೇ ಎಂದು ಪ್ರಶ್ನಿಸಿದರಲ್ಲದೇ 2017ರ ಪಟ್ಟಿಯನ್ನು ಅಂತಿಮ ಎಂದು ಹೊರಡಿಸಿದ ಮೇಲೆ ಅದರಂತೆ ಕ್ರಮಕೈಗೊಳ್ಳಬೇಕಲ್ಲವೇ ಎಂದರು. ಇದಕ್ಕೆ ಸದಸ್ಯರುಗಳಾದ ಶ್ರೀ.ಜಿ. ಧರ್ಮಪ್ರಸಾದ್ ಹಾಗೂ ಶ್ರೀ. ಬಳ್ಳೆಕೆರೆ ಸಂತೋಷ್ ಇವರುಗಳು ಧ್ವನಿಗೂಡಿಸಿದರು.



Scanned with CamScanner

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿ ಹಾಗೂ ಶ್ರೀ ಎನ್.ಆರ್. ಮಂಜುನಾಥ ಇವರುಗಳು ಮಾತನಾಡುತ್ತಾ, ಈ ವೇತನ ನಿಗದೀಕರಣ ಪ್ರಕ್ರಿಯೆಯನ್ನು ಶೀಘ್ರವಾಗಿ ಕ್ರಮ ಕೈಗೊಳ್ಳಬೇಕೆಂದರು

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಈಗಾಗಲೇ ದಿನಾಂಕ:31–03–2021 ರಂದು ಡಿ.ಪಿ.ಸಿ ಸಭೆಯನ್ನು ಕರೆದಿರುವುದರಿಂದ ಸಭೆಯಲ್ಲಿ ನಿರ್ಣಯ ಕೈಗೊಂಡು ತ್ವರಿತವಾಗಿ ಬಡ್ತಿ ಹೊಂದಿದ ನೌಕರರುಗಳಿಗೆ ವೇತನ ನಿಗದೀಕರಣ ಮಾಡಲು ನಿರ್ಣಯಿಸಲಾಯಿತು.

**2. ಸಹ್ಯಾದ್ರಿ ಕಾಲೇಜಿನ ಕೆಲವು ಅಧ್ಯಾಪಕರುಗಳ ವೃತ್ತಿ ಪದೋನ್ನತಿ ಕುರಿತು.**

**ಚರ್ಚೆ:**ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್ ಬಾಬು ಮತ್ತು ಶ್ರೀ ಹೆಚ್. ರಾಮಲಿಂಗಪ್ಪ ಇವರುಗಳು ಮಾತನಾಡುತ್ತಾ, ಸಹ್ಯಾದ್ರಿ ಕಾಲೇಜಿನ ಕೆಲವು ಅಧ್ಯಾಪಕರುಗಳ ವೃತ್ತಿ ಪದೋನ್ನತಿಯ ಬಗ್ಗೆ ಒಂದೇ ದಿನ ನೇಮಕಗೊಂಡ ಅಧ್ಯಾಪಕರುಗಳಲ್ಲಿ ಕೆಲವು ಅಧ್ಯಾಪಕರುಗಳ ವೃತ್ತಿಪದೋನ್ನತಿಗೆ ಕ್ರಮಕೈಗೊಂಡಿದ್ದು ಇನ್ನೂ ಕೆಲವು ಅಧ್ಯಾಪಕರುಗಳ ಪದೋನ್ನತಿ ಮಂಜೂರು ಆಗಿರುವುದಿಲ್ಲವೆಂದು ತಿಳಿಸುತ್ತಾ ಇದನ್ನು ಪರಿಶೀಲಿಸುವಂತೆ ಕೋರಿದರು.

ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥ ಇವರು ಮಾತನಾಡುತ್ತಾ, ಯಾವ ಕಾರಣದಿಂದ ಮಂಜೂರಾಗಿರುವುದಿಲ್ಲವೆಂದು ಪರಿಶೀಲಿಸುವಂತೆ ಕೋರಿದರು.

ಇದಕ್ಕೆ ಉತ್ತರಿಸಿದ ಕುಲಸಚಿವರು ಅಧ್ಯಾಪಕರುಗಳ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ ಯುಜಿಸಿ ಮಾನದಂಡಗಳಿದ್ದು ಅವುಗಳನ್ನು ಪೂರೈಸಿರುವ ಬಗ್ಗೆ ಐ.ಕ್ಯೂ.ಎ.ಸಿ ಪರಿಣಿತರಿಂದ ಮೌಲ್ಯಮಾಪನ ಮಾಡಿಸಿ ನಂತರ ಅದರಂತೆ ನೇಮಕಾತಿ ಮಂಡಳಿಯು ಕ್ರಮಕೈಗೊಳ್ಳಲಾಗುತ್ತದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಸಹ್ಯಾದ್ರಿ ಕಾಲೇಜುಗಳ ಅಧ್ಯಾಪಕರುಗಳ ವೃತ್ತಿ ಪದೋನ್ನತಿಯನ್ನು ನಿಯಮಗಳಡಿಯಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**3. 371(ಜೆ) ಅಡಿಯಲ್ಲಿ ನೇಮಕಗೊಂಡ ಅಧ್ಯಾಪಕೇತರ ನೌಕರರ ಖಾಯಂ ಪೂರ್ವ ಸೇವಾವಧಿ ಘೋಷಣೆ ಕುರಿತು.**

**ಚರ್ಚೆ:** ಸದಸ್ಯರುಗಳಾದ ಶ್ರೀ ಹೆಚ್.ಬಿ. ರಮೇಶ್‌ಬಾಬು, ಶ್ರೀಮತಿ ಕಿರಣ್ ರವೀಂದ್ರದೇಸಾಯಿ, ಶ್ರೀ ಹೆಚ್. ರಾಮಲಿಂಗಪ್ಪ ಹಾಗೂ ಶ್ರೀ ಜಿ. ಧರ್ಮಪ್ರಸಾದ್ ಇವರುಗಳು ಮಾತನಾಡುತ್ತಾ, 371(ಜೆ) ಅಡಿಯಲ್ಲಿ ನೇಮಕಗೊಂಡ ಅಧ್ಯಾಪಕೇತರ ಸಿಬ್ಬಂದಿಗಳ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡಲು ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ಪ್ರಸ್ತುತ ಖಾಯಂಪೂರ್ವ ಸೇವಾವಧಿಯನ್ನು ಘೋಷಣೆ ಮಾಡಿ ಹೊರಡಿಸಿರುವ ಆದೇಶದಲ್ಲಿ ಹಲವಾರು ಷರತ್ತುಗಳನ್ನು ವಿಧಿಸಿದ್ದು, ಅವುಗಳನ್ನು ತೆರವುಗೊಳಿಸಿ ಪರಿಷ್ಕೃತ ಆದೇಶ ಹೊರಡಿಸುವಂತೆ ಕೋರಿದರು.

ಇದಕ್ಕೆ ಉತ್ತರಿಸಿದ ಕುಲಸಚಿವರು ಈ ನೇಮಕಾತಿಗಳ ಕುರಿತು ಸಂಘ ಸಂಸ್ಥೆಗಳಿಂದ, ಸರ್ಕಾರದಿಂದ ದೂರುಗಳು ಸ್ವೀಕೃತವಾಗಿದ್ದು, ಇವುಗಳ ಪರಿಶೀಲನೆಗಾಗಿ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ಇನ್ನೂ ವರದಿಯನ್ನು ನೀಡಿರುವುದಿಲ್ಲವೆಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿ ಇವರು ಮಾತನಾಡುತ್ತಾ, ಈ ಸಿಬ್ಬಂದಿಗಳ ಪ್ರಕರಣವನ್ನು ಮಾನವೀಯತೆಯಡಿಯಲ್ಲಿ ಪರಿಗಣಿಸುವಂತೆ ಕೋರಿದರು.



Scanned with CamScanner

ಕುಲಸಚಿವ (ಮೌಲ್ಯಮಾಪನ) ಇವರು ಮಾತನಾಡುತ್ತಾ, ನೇಮಕಾತಿ ಆದೇಶಗಳಲ್ಲಿ ಮಾತ್ರ ಷರತ್ತುಗಳನ್ನು ವಿಧಿಸಬಹುದಾಗಿದ್ದು, ಖಾಯಂ ಪೂರ್ವ ಅವಧಿ ಘೋಷಣೆಯ ಆದೇಶದಲ್ಲಿ ಷರತ್ತುಗಳನ್ನು ವಿಧಿಸಲು ಅವಕಾಶವಿರುವುದಿಲ್ಲವೆಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ 371 (ಜೆ) ಅಡಿಯಲ್ಲಿ ನೇಮಕಗೊಂಡ ಅಧ್ಯಾಪಕೇತರ ನೌಕರರ ಖಾಯಂ ಪೂರ್ವ ಸೇವಾವಧಿಯಲ್ಲಿನ ಷರತ್ತುಗಳನ್ನು ತೆರವುಗೊಳಿಸಿ ಪರಿಷ್ಕೃತ ಆದೇಶ ಹೊರಡಿಸಲು ನಿರ್ಣಯಿಸಲಾಯಿತು.

**4. ಡೀನರ ಜ್ಯೇಷ್ಠತೆಯಲ್ಲಿ ಸಿಂಡಿಕೇಟ್‌ಗೆ ನಾಮನಿರ್ದೇಶನದ ಕುರಿತು.**

**ಚರ್ಚೆ:** ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ಇವರು ಮಾತನಾಡುತ್ತಾ, ಡಾ. ಸಿ. ಗೀತಾ – ಇವರು ಮನವಿಯೊಂದನ್ನು ಸಲ್ಲಿಸಿ ತಮಗೆ ಡೀನರ ಜ್ಯೇಷ್ಠತೆಯಲ್ಲಿ ಸಿಂಡಿಕೇಟ್‌ಗೆ ನಾಮನಿರ್ದೇಶನ ಮಾಡಬೇಕಾಗಿರುವ ಬಗ್ಗೆ ಕೋರಿರುವುದನ್ನು ಪ್ರಸ್ತಾಪಿಸಿದರು.

ಇದಕ್ಕೆ ಉತ್ತರಿಸಿದ ಕುಲಸಚಿವರು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ಮತ್ತು ಅದರಡಿಯಲ್ಲಿ ಕಾನೂನು ತಜ್ಞರುಗಳು ಕೆಳಕಂಡಂತೆ ನೀಡಿರುವ ವ್ಯಾಖ್ಯಾನಗಳನ್ನು ಸಭೆಗೆ ವಿವರಿಸಿದರು.

**Dean under clause (d):** Deanship not being a post in any cadre, it is the order in the Seniority list pertaing to that Cadre or class of post it belongs that determines the seniority for nominating a Dean to be a member of the Syndicate. The words "**according to seniority" in cl. (d) have reference to seniority in the cadre or class of posts of Professors, who are not Principals of Colleges.** The office of a Syndicate's membership is a public office, which can be challenged through a writ of quo warranto".

ಹಾಗೂ ಈಗಾಗಲೇ ಸರ್ಕಾರಕ್ಕೆ ಸ್ಪಷ್ಟೀಕರಣ ಕೋರಿ ಪತ್ರ ಬರೆಯಲಾಗಿದ್ದು ಸರ್ಕಾರದಿಂದ ಸ್ಪಷ್ಟೀಕರಣ ಬಂದ ಕೂಡಲೇ ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದರು.

ಸದಸ್ಯರರಾದ ಶ್ರೀ ಜಿ. ಧರ್ಮಪ್ರಸಾದ್ ಇವರು ಮಾತನಾಡಿ ಸರ್ಕಾರದ ಅನುಮೋದನೆಯನ್ನು ಕಾಯ್ದಿರಿಸಿ ಕ್ರಮಕೈಗೊಳ್ಳಿ ಒಂದು ವೇಳೆ ಸ್ಪಷ್ಟೀಕರಣವು ಇವರಿಗೆ ವ್ಯತಿರಿಕ್ತವಾಗಿದಲ್ಲಿ ಸದಸ್ಯತ್ವದಿಂದ ಮುಕ್ತಗೊಳಿಸಬಹುದಾಗಿದೆ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಡೀನರ ಜ್ಯೇಷ್ಠತೆಯಲ್ಲಿ ಸಿಂಡಿಕೇಟ್ ಸದಸ್ಯತ್ವದ ಕುರಿತು ಸರ್ಕಾರದ ಸ್ಪಷ್ಟೀಕರಣವನ್ನು ಕಾಯ್ದಿರಿಸಿ ಆದೇಶ ಹೊರಡಿಸಿ ನಂತರ ಸರ್ಕಾರದಿಂದ ಬರುವ ಸ್ಪಷ್ಟೀಕರಣದಂತೆ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

**5. ವಾಹನ ಚಾಲಕರುಗಳನ್ನು ಖಾಯಂಗೊಳಿಸುವುದರ ಕುರಿತು.**

**ಚರ್ಚೆ:** ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್ ಇವರು ಮಾತನಾಡುತ್ತಾ, ಹಂಗಾಮಿ ವಾಹನ ಚಾಲಕರುಗಳನ್ನು ಖಾಯಂಗೊಳಿಸುವ ಕುರಿತ ಪರಿನಿಯಮವನ್ನು ರಚಿಸಿ ಸಿಂಡಿಕೇಟ್ ಸಭೆಗೆ ಮಂಡಿಸಲು ಈ ಹಿಂದಿನ ಸಭೆಯಲ್ಲಿಯೇ ನಿರ್ಣಯಿಸಲಾಗಿತ್ತು. ಆದರೆ ಇದುವರೆಗೂ ಕ್ರಮಕೈಗೊಂಡಿಲ್ಲದಿರುವುದರ ಬಗ್ಗೆ ಪ್ರಸ್ತಾಪಿಸಿ ಕೂಡಲೇ ಕ್ರಮವಹಿಸುವಂತೆ ಕೋರಿದರು.



Scanned with CamScanner

ಇದಕ್ಕೆ ಉತ್ತರಿಸಿದ ಕುಲಸಚಿವರು ಯಾವುದೇ ಹಂಗಾಮಿ ಅಥವಾ ಹೊರಗುತ್ತಿಗೆ ಇನ್ನಿತರೆ ನೇಮಕಾತಿಯನ್ನು ಮಾಡದಿರುವ ಬಗ್ಗೆ ಸರ್ಕಾರದ ಸ್ಪಷ ಆದೇಶವಿದ್ದು, ಸರ್ಕಾರದ ಅನುಮತಿ ಇಲ್ಲದೇ ಯಾವುದೇ ಖಾಯಂ ಆದೇಶ ನೀಡಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಹಂಗಾಮಿ ವಾಹನ ಚಾಲಕರನ್ನು ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿಲ್ಲದೇ ಇರುವುದರಿಂದ ಇದಕ್ಕೆ ಅವಕಾಶವಿರುವುದಿಲ್ಲ ಎಂದು ಸಭೆಗೆ ತಿಳಿಸಿದರು.

ಕುಲಸಚಿವ (ಮೌಲ್ಯಮಾಪನ) ಇವರು ಮಾತನಾಡುತ್ತಾ, ವಾಹನ ಚಾಲಕರುಗಳು ಅಗತ್ಯ ಸೇವೆಯಡಿಯಲ್ಲಿ ಬರುವುದರಿಂದ ಇವರ ಖಾಯಂಗೊಳಿಸಲು ಪರಿಗಣಿಸಬಹುದು ಎಂದರು.

ಮುಂದುವರೆದು ಮಾತನಾಡಿದ ಕುಲಸಚಿವರು ಹೀಗೆ ಮಾಡಿದಲ್ಲಿ ಸರ್ಕಾರದ ಆದೇಶಕ್ಕೆ ವಿರುದ್ಧವಾಗುತ್ತದೆ ಆದ್ದರಿಂದ ಇದಕ್ಕೆ ತಮ್ಮ ಅಸಮ್ಮತಿ ಇರುವುದಾಗಿ ತಿಳಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಹಂಗಾಮಿ ವಾಹನಚಾಲಕರನ್ನು ಸೇವೆಯಲ್ಲಿ ಖಾಯಂಗೊಳಿಸುವ ಪರಿನಿಯಮವನ್ನು ಆದಷ್ಟು ಬೇಗ ಪ್ರಾಧಿಕಾರಗಳ ಸಭೆಗೆ ಮಂಡಿಸಲು ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

6. **ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಕಾರ್ಯಾಗಾರ ಏರ್ಪಡಿಸುವುದರ ಕುರಿತು.**

**ಚರ್ಚೆ:** ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥ ಇವರು ಮಾತನಾಡುತ್ತಾ, ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತು ವಿಶ್ವವಿದ್ಯಾಲಯದಲ್ಲಿ ಪರಿಣಿತರನ್ನು ಆಹ್ವಾನಿಸಿ ಒಂದು ಕಾರ್ಯಾಗಾರವನ್ನು ಏರ್ಪಡಿಸಿದಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳಿಗೆ ಉಪಯುಕ್ತ ಮಾಹಿತಿ ದೊರೆಯುವುದು ಎಂದರು.

**ನಿರ್ಣಯ:** ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತು ಪರಿಣಿತರನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ ಒಂದು ಕಾರ್ಯಾಗಾರವನ್ನು ಆಯೋಜಿಸಲು ನಿರ್ಣಯಿಸಲಾಯಿತು.

**ಕುಲಪತಿಗಳು ಪ್ರಾಸ್ತಾಪಿಸಿದ ವಿಷಯ:**

7. ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ EDGS ಜಾರಿಗೊಳಿಸುವ ಸಂಬಂಧ M/s KEONICS, Bangalore ಇವರ ಮೂಲಕ ಮಾಡಿಕೊಳ್ಳಲಾದ ಒಪ್ಪಂದದ ಮೇರೆಗೆ ರೂ. 132/– (ಜಿ.ಎಸ್.ಟಿ. ಹೊರತು ಪಡಿಸಿ) ಅಂಕಪಟ್ಟಿ ಶುಲ್ಕವನ್ನು ಮತ್ತೆ ಸಂಗ್ರಹಿಸುವುದು ಬೇಡವೆಂದು ಹಾಗೂ ಈಗಾಗಲೇ ಸಂಗ್ರಹಿಸಿರುವ ಪರೀಕ್ಷಾ ಶುಲ್ಕದಲ್ಲಿ ಇದನ್ನು ಭರಿಸಲು ತೀರ್ಮಾನಿಸಲಾಯಿತು. ಹಾಗೂ ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/–
ಕುಲಪತಿಗಳು



Scanned with CamScanner